EMAIL : dairyadadaari@gmail.com ಸಂಪುಟ: 01 ಸಂಚಿಕೆ: 40
ಬೆಲೆ ರೂ : 2.00
ರಾಯಚೂರು
ಪುಟ: 4

ನಿಮ್ಮ ನಂಬಿಕೆಯ ಧ್ವನಿ

# ಧೈರ್ಯದ ದಾರಿ

DAIRYADA DAARI NEWS PAPER

ಸಂಪಾದಕರು : ಸೈಯದ್ ಅಹ್ಮದ್ ಹುಸೇನಿ ಮತವಾಲೆ
Cell : 6360866626, 9036887793

KANNADA DAILY NEWS PAPER
ಕನ್ನಡ ದಿನಪತ್ರಿಕೆ

DAIRYADA DAARI
RNI NO: KNKAN/25/A2795 ಶನಿವಾರ: 17–01–2026

ಜಿಲ್ಲಾಡಳಿತದ ಸಹಯೋಗದೊಂದಿಗೆ ರಾಯಚೂರು ಮಹಾನಗರ ಪಾಲಿಕೆಯಿಂದ ವಿನೂತನ ಕಾರ್ಯ

## ರಾಯಚೂರಿನ ಐತಿಹಾಸಿಕ ಕೋಟೆಯ ದೀಪಾಲಂಕಾರ ಕಾಮಗಾರಿಗೆ ಚಾಲನೆ

ಧೈರ್ಯದ ದಾರಿ



**ರಾಯಚೂರು,ಜ.16–** ರಾಯಚೂರು ಮಹಾನಗರ ಪಾಲಿಕೆಯ ಅನುದಾನದಲ್ಲಿ ಐತಿಹಾಸಿಕ ರಾಯಚೂರು ಕೋಟೆಯ ದೀಪಾಲಂಕಾರ ಕಾಮಗಾರಿಗೆ ವೈದ್ಯಕೀಯ ಶಿಕ್ಷಣ ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಶರಣಪ್ರಕಾಶ ಪಾಟೀಲ ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜು ಅವರು ಜನವರಿ 16ರಂದು ಚಾಲನೆ ನೀಡಿದರು.

ನಗರದ ಕೇಂದ್ರ ಬಸ್ ನಿಲ್ದಾಣದ ಪ್ರವೇಶ ದ್ವಾರದ ಕೋಟೆ ಪ್ರದೇಶದ ಬಯಲು ಗ್ರಂಥಾಲಯದ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಚಿವರು ವಿನೂತನ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ರಾಯಚೂರು ಮಹಾನಗರ ಪಾಲಿಕೆಯಿಂದ ಈಗಾಗಲೇ ರಾಯಚೂರು ಸಿಟಿಯು ಸೌಂದರ್ಯೀಕರಣ ಕಾರ್ಯ ಆರಂಭಗೊಂಡಿದೆ. ಸ್ವಚ್ಛತೆಯ ಬಗ್ಗೆ ಸಿಟಿ ಜನರಲ್ಲಿ ಜಾಗೃತಿ ಮೂಡಿಸಲು ಸಿಟಿಯ ಪ್ರಮುಖ ರಸ್ತೆಗಳಲ್ಲಿ ಸೌಂದರ್ಯ ಮತ್ತು ಶುಚಿತ್ವದ ಸಂದೇಶಕ್ಕಾಗಿ ಗೋಡೆಗಳ ಮೇಲೆ ಚಿತ್ರಪಟ ನಿರ್ಮಾಣ ಕಾರ್ಯ ಬಿರುಸಿನಿಂದ ನಡೆದಿದೆ. ಇದೀಗ ಕೋಟೆಗೆ ದೀಪಾಲಂಕಾರಕ್ಕು ಕಾರ್ಯಯೋಜನೆ ರೂಪಿಸಲಾಗಿದೆ. ರಾಯಚೂರು ಉತ್ಸವ ನಿಗದಿಯಾಗಿದ್ದರಿಂದಲು ಸಹ ರಾಯಚೂರು ಸಿಟಿಯನ್ನು ಹಬ್ಬದ ರೀತಿಯಲ್ಲಿ ಸಿಂಗಾರಗೊಳಿಸಲು ಸಹ ಯೋಜಿಸಿ ಜಿಲ್ಲಾಡಳಿತದ ಸಹಯೋಗದಿಂದಿಗೆ ಈ ಕಾರ್ಯ ಯೋಜನೆ ರೂಪಿಸಲಾಗಿದೆ ಎಂದು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ ಅವರು ಇದೆ ವೇಳೆ ಸಚಿವರಿಗೆ ವಿವರಿಸಿದರು.

ಈ ಸಂದರ್ಭದಲ್ಲಿ ಮಹರ್ಷಿ ವಾಲ್ಮೀಕಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮೀಣ ಶಾಸಕರಾದ ಬಸನಗೌಡ ದದ್ದಲ್, ನಗರ ಕ್ಷೇತ್ರದ ಶಾಸಕರಾದ ಡಾ.ಎಸ್.ಶಿವರಾಜ ಪಾಟೀಲ, ಮಾನ್ವಿ ಶಾಸಕರಾದ ಹಂಪಯ್ಯ ನಾಯಕ, ವಿಧಾನ ಪರಿಷತ್ ಶಾಸಕರಾದ ಎ.ವಸಂತಕುಮಾರ, ಜಿಲ್ಲಾಧಿಕಾರಿಗಳಾದ ನಿತೀಶ್ ಕೆ., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾದಿಕಾರಿಗಳಾದ ಈಶ್ವರ ಕುಮಾರ ಕಾಂದೂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಕ್ಷು ಗಿರಿ ಹಾಗೂ ಇನ್ನಿತರ ಗಣ್ಯ ಮಹನಿಯರು ಇದ್ದರು.

## ರಾಯಚೂರಿನಲ್ಲಿ ರಾಷ್ಟ್ರೀಯ ರಸ್ತೆ ಸುರಕ್ಷತಾ ಜಾಗೃತಿ ಮಾಸಾಚರಣ

**ರಾಯಚೂರು,ಜ.16–**ಇಲ್ಲಿನ ಪ್ರಾದೇಶಿಕ ಸಾರಿಗೆ ಕಚೇರಿಯಲ್ಲಿ ಇತ್ತೀಚೆಗೆ 37ನೇ ರಾಷ್ಟ್ರೀಯ ರಸ್ತೆ ಸುರಕ್ಷತಾ ಜಾಗೃತಿ ಮಾಸಾಚರಣೆ–2026ರ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಭಾರಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಾದ ಸಿ.ಈರಣ್ಣ ಅವರು ವಹಿಸಿದ್ದರು. ಈ ವೇಳೆ ರಸ್ತೆ ಸುರಕ್ಷತೆ ಬಗ್ಗೆ ಸಾರ್ವಜನಿಕರಿಗೆ ಜಾಗೃತಿ ಮೂಡಿಸಿದರು ಮತ್ತು ರಸ್ತೆ ಸುರಕ್ಷತೆ ನಿಯಮಗಳ ಬಗ್ಗೆ ಕರ ಪತ್ರಗಳನ್ನು ಹಂಚಲಾಯಿತು.

ಇದೇ ಸಂದರ್ಭದಲ್ಲಿ ಮೋಟಾರ್ ವಾಹನ ನಿರೀಕ್ಷಕರಾದ ರಾಕೇಶ್.ಎಂ, ಕಚೇರಿಯ ಅಧೀಕ್ಷಕರಾದ ಜೀನತ್ ಸಾಜೀದಾ, ಅರ್ಜುನ್, ಲೆಕ್ಕಾಧಿಕ್ಷಕಮೋಹಿನುದ್ದಿನ್ ಸೇರಿದಂತೆ ಇತರರು ಇದ್ದರು. ರವೀಂದ್ರ ರೆಡ್ಡಿ ಅವರು ಸ್ವಾಗತಿಸಿದರು. ರವಿ ಕಿರಣ ಅವರು ನಿರೂಪಿಸಿದರು.

## ಜನವರಿ 17ರಂದು ಜೆಸ್ಕಾಂ ಗ್ರಾಹಕರ ಸಂವಾದ ಸಭ

**ರಾಯಚೂರು,ಜ.16**ಇಲ್ಲಿನ ಜೆಸ್ಕಾಂ ಕಾರ್ಯ ಮತ್ತು ಪಾಲನೆ ಉಪ ವಿಭಾಗ–1 ಹಾಗೂ 2ರ ಕಚೇರಿಗಳಲ್ಲಿ ಜನವರಿ 17ರ ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆವರೆಗೆ ಗ್ರಾಹಕರ ಸಂವಾದ ಸಭೆ ಹಮ್ಮಿಕೊಳ್ಳಲಾಗಿದ್ದು, ಸಭೆಗೆ ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಹಕರು ಭಾಗವಹಿಸುವಂತೆ ಜೆಸ್ಕಾಂ ಕಾರ್ಯ ಮತ್ತು ಪಾಲನೆ ಉಪ ವಿಭಾಗ–1 ಹಾಗೂ 2ರ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಶಾರ್ಟ್ ಸರ್ಕ್ಯೂಟ್‌ನಿಂದ ಪೇಂಟ್ಸ್ ಮಳಿಗೆಯಲ್ಲಿ ಭಾರೀ ಅಗ್ನಿ ಅವಘಡ ರೂ.60 ಲಕ್ಷ ನಷ್ಟ

ಧೈರ್ಯದ ದಾರಿ






**ಮಾನ್ವಿ,ಜ.16–** ಪಟ್ಟಣದ ಬಸವ ವೃತ್ತದ ಅಪೂರ್ಣ ಚಿತ್ರಮಂದಿರದ ಎದುರುಗಡೆ ಇರುವ ಬಿಚ್ಚಾಲಿ ವೀರೇಶ್ ಬಾಬು ಅವರ ಮಾಲೀಕತ್ವದ ಶ್ರೀ ಲಕ್ಷ್ಮಿ ವೆಂಕಟೇಶ್ವರ ಪೇಂಟ್ಸ್ ಮಳಿಗೆಯಲ್ಲಿ ಶಾರ್ಟ್ ಸರ್ಕ್ಯೂಟ್‌ನಿಂದ ಭಾರೀ ಬೆಂಕಿ ಅವಘಡ ಸಂಭವಿಸಿದೆ.

ಇಂದು ಬೆಳಿಗ್ಗೆ ಸುಮಾರು 4 ಗಂಟೆಯ ವೇಳೆಗೆ ಮಳಿಗೆಯಿಂದ ಹೊಗೆ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಸ್ಥಳೀಯರು ಅಂಗಡಿ ಮಾಲೀಕರಿಗೆ ಮಾಹಿತಿ ನೀಡಿದ್ದಾರೆ.

ಮಳಿಗೆಯಲ್ಲಿ ಪೇಂಟ್ ಸೇರಿದಂತೆ ರಾಸಾಯನಿಕ ವಸ್ತುಗಳು ಸಂಗ್ರಹವಾಗಿದ್ದ ಕಾರಣ ಬೆಂಕಿ ಕ್ಷಿಪ್ರವಾಗಿ ವ್ಯಾಪಿಸಿ ತೀವ್ರವಾಗಿ ಹೊತ್ತಿ ಉರಿದಿದೆ.

ಅಗ್ನಿಶಾಮಕ ದಳದವರು ಸ್ಥಳಕ್ಕೆ ಆಗಮಿಸಿ ಬೆಂಕಿಯನ್ನು ನಿಯಂತ್ರಣಕ್ಕೆ ತಂದರೂ, ಅಷ್ಟರೊಳಗೆ ಮಳಿಗೆ ಸಂಪೂರ್ಣವಾಗಿ ಸುಟ್ಟು ಹೋಗಿದ್ದು ಒಳಗಿದ್ದ ಎಲ್ಲಾ ಸಾಮಗ್ರಿಗಳು ಕರಕಲಾಗಿವೆ. ಈ ಅವಘಡದಲ್ಲಿ ಅಂದಾಜು ರೂ. 60 ಲಕ್ಷ ನಷ್ಟ ಸಂಭವಿಸಿರುವುದಾಗಿ ತಿಳಿದುಬಂದಿದೆ.

ಮಳಿಗೆಯ ಅಕ್ಕಪಕ್ಕದಲ್ಲಿರುವ ಮಾರುತಿ ಬುಕ್ ಸ್ಟಾಲ್ ಹಾಗೂ ಶ್ರೀ ಜೈ ಹನುಮಾನ್ ಕಿರಾಣಿ ಸ್ಟೋರ್ಗಳಿಗೆ ಯಾವುದೇ ಹಾನಿ ಸಂಭವಿಸಿಲ್ಲ. ಹೆಚ್ಚಿನ ಅಪಾಯ ತಪ್ಪಿದ ಹಿನ್ನೆಲೆಯಲ್ಲಿ ಸ್ಥಳೀಯರು ನಿಟ್ಟುಸಿರು ಬಿಟ್ಟಿದ್ದಾರೆ. ಘಟನೆಯ ಕುರಿತು ಸಂಬಂಧಿಸಿದ ಅಧಿಕಾರಿಗಳು ಪರಿಶೀಲನೆ ನಡೆಸುತ್ತಿದ್ದಾರೆ.

## ಮಾನ್ವಿ ಪಟ್ಟಣದಲ್ಲಿ ಕೆಎಸ್‌ಆರ್‌ಟಿಸಿ ಬಸ್–ಕಾರ್ ನಡುವೆ ಅಪಘಾತ; ಚಾಲಕ ಪ್ರಾಣಾಪಾಯದಿಂದ ಪಾರು

ಧೈರ್ಯದ ದಾರಿ





**ಮಾನ್ವಿ,ಜ.16–**ಪಟ್ಟಣದ ಬಾಷುಮಿಯ್ಯ ಪದವಿ ಕಾಲೇಜ್ ಮುಂಭಾಗದಲ್ಲಿ ಶುಕ್ರವಾರ ಬೆಳಿಗ್ಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ (ಕೆಎಸ್‌ಆರ್‌ಟಿಸಿ) ಬಸ್ ಮತ್ತು ಕಾರ್ ನಡುವೆ ಸಂಭವಿಸಿದ ಅಪಘಾತದಲ್ಲಿ ಕಾರ್ ಚಾಲಕ ವೀರೇಶ್ ಪಲ್ಲೆದ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಕಾರಟಗಿ ಪಟ್ಟಣದಲ್ಲಿ ಜೆಸ್ಕಾಂ ಕಚೇರಿಯಲ್ಲಿ ಗುತ್ತಿಗೆದಾರನಾಗಿ ಕಾರ್ಯನಿರ್ವಹಿಸುತ್ತಿದ್ದ ಕಾರಟಗಿ ಮೂಲದ ವೀರೇಶ್ ಪಲ್ಲೆದ್ ಅವರು ಚಲಾಯಿಸುತ್ತಿದ್ದ ಕಾರ್‌ಗೆ ಸಾರಿಗೆ ಬಸ್ ಡಿಕ್ಕಿಯಾದ ಪರಿಣಾಮ ಅಪಘಾತ ಸಂಭವಿಸಿದೆ. ಘಟನೆಯಲ್ಲಿ ಚಾಲಕ ವೀರೇಶ್ ಅವರಿಗೆ ಅಲ್ಪಸ್ವಲ್ಪ ಗಾಯಗಳಾಗಿದ್ದು, ಸ್ಥಳಕ್ಕೆ ಆಗಮಿಸಿದ ಪೊಲೀಸ್ ಸಿಬ್ಬಂದಿ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಮಾನ್ವಿ ತಾಲೂಕು ಆಸ್ಪತ್ರೆಗೆ ರವಾನಿಸಿದ್ದಾರೆ ಎಂದು ತಿಳಿದುಬಂದಿದೆ.

ಅಪಘಾತದ ಕಾರಣಗಳ ಕುರಿತು ಪೊಲೀಸರು ಪರಿಶೀಲನೆ ಕೈಗೊಂಡಿದ್ದು, ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಳ್ಳಲಾಗಿದೆ.

## ಜನವರಿ ಮಾಹೆಗೆ ಪಡಿತರ ಧಾನ್ಯ ವಿತರಣೆ: ಜಿಲ್ಲಾಧಿಕಾರಿ ನಿತೀಶ್ ಕೆ.

ಧೈರ್ಯದ ದಾರಿ

**ರಾಯಚೂರು,ಜ.16–** ಇಲ್ಲಿಯ ಜಿಲ್ಲಾ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯಿಂದ 2026ರ ಜನವರಿ ಮಾಹೆಗೆ ಪಡಿತರ ಧಾನ್ಯಗಳನ್ನು ವಿತರಣೆ ಮಾಡಲಾಗುತ್ತಿದೆ ಎಂದು ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರು ತಿಳಿಸಿದ್ದಾರೆ.

ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ ಜಿಲ್ಲೆಯ ಕೇಂದ್ರ ವ್ಯಾಪ್ತಿಯ ಪ್ರತಿ ಅಂತ್ಯೋದಯ(ಎಎವೈ) ಪಡಿತರ ಚೀಟಿಗೆ 21 ಕೆ.ಜಿ ಜೋಳ ಮತ್ತು 14 ಕೆ.ಜಿ ಸಾರವರ್ಧಿತ ಅಕ್ಕಿ ಹಾಗೂ ಕೇಂದ್ರ ವ್ಯಾಪ್ತಿಯ ಪಿ.ಹೆಚ್.ಹೆಚ್(ಬಿಪಿಎಲ್) ಪಡಿತರ ಚೀಟಿಯಲ್ಲಿನ ಪ್ರತಿ ಫಲಾನುಭವಿಗೆ 03 ಕೆ.ಜಿ ಜೋಳ ಮತ್ತು 02 ಕೆ.ಜಿ ಸಾರವರ್ಧಿತ ಅಕ್ಕಿ ಇದರ ಜೊತೆಗೆ ರಾಜ್ಯ ಸರ್ಕಾರದ ಅನ್ನಭಾಗ್ಯ ಯೋಜನೆಯಡಿಯಲ್ಲಿ ರಾಜ್ಯ ಸರ್ಕಾರದ ಮಾರ್ಗಸೂಚಿಯಂತೆ ಏಕ ಸದಸ್ಯ, ದ್ವಿ–ಸದಸ್ಯ ಮತ್ತು ತ್ರಿ–ಸದಸ್ಯ ಎಎವೈ ಪಡಿತರ ಚೀಟಿಗಳನ್ನು ಹೊರತುಪಡಿಸಿ ನಾಲ್ಕು ಮತ್ತು ನಾಲ್ಕಕಿಂತ ಹೆಚ್ಚಿನ ಸದಸ್ಯರುಳ್ಳ ಕೇಂದ್ರ & ರಾಜ್ಯ ವ್ಯಾಪ್ತಿಯ ಅಂತ್ಯೋದಯ(ಎಎವೈ) ಮತ್ತು ಪಿ.ಹೆಚ್.ಹೆಚ್(ಬಿಪಿಎಲ್) ಪಡಿತರ ಚೀಟಿಯ ಪ್ರತಿ ಫಲಾನುಭವಿಗೆ ಹೆಚ್ಚುವರಿಯಾಗಿ 05 ಕೆ.ಜಿ ಅಕ್ಕಿಯನ್ನು ಉಚಿತವಾಗಿ ವಿತರಿಸಲಾಗುವುದು.

ಒಂದು ರಾಷ್ಟ್ರ ಒಂದು ಪಡಿತರ ಚೀಟಿ (ಅಂತರ್ ರಾಜ್ಯ/ ಅಂತರ್ ಜಿಲ್ಲೆ) ಪೋರ್ಟೆಬಿಲಿಟಿ ಜಾರಿಯಲ್ಲಿರುವುದರಿಂದ ಯಾವುದೇ ರಾಜ್ಯದ ಪಡಿತರ ಚೀಟಿದಾರರು ಯಾವುದೇ ವರ್ಗದ ಪಡಿತರ ಚೀಟಿದಾರರು ಯಾವುದೇ ನ್ಯಾಯಬೆಲೆ ಅಂಗಡಿಯಲ್ಲಿ ಪಡಿತರವನ್ನು ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಯಾವುದೇ ನ್ಯಾಯಬೆಲೆ ಅಂಗಡಿಕಾರರು ಕಡಿಮೆ ಪ್ರಮಾಣದ ಪಡಿತರವನ್ನು ವಿತರಣೆ ಮಾಡಿದ್ದಲ್ಲಿ, ಹಣ ಕೇಳಿದ್ದಲ್ಲಿ ಮತ್ತು ಇತರೆ ದೂರುಗಳಿಗೆ ನಿಶುಲ್ಕ ದೂರವಾಣಿ ಸಂಖ್ಯೆ 1967ಗೆ ಹಾಗೂ ತಾಲ್ಲೂಕಿನಲ್ಲಿರುವ ತಹಶೀಲ್ದಾರರ ಕಚೇರಿಗೆ ಅಥವಾ ಜಿಲ್ಲೆಯ ಉಪನಿರ್ದೇಶಕರ ಕಚೇರಿಗೆ ದೂರನ್ನು ಸಲ್ಲಿಸಬಹುದಾಗಿದೆ.

ಈ ಯೋಜನೆಯಡಿ ವಿತರಿಸಲಾದ ಆಹಾರ ಧಾನ್ಯಗಳನ್ನು ಹಣಕ್ಕಾಗಿ ಪಡಿತರ ಚೀಟಿದಾರರು ಮಾರಾಟ ಮಾಡುವುದಾಗಲಿ ಅಥವಾ ಸಂಗ್ರಹಣೆ ಮಾಡುವುದು ಕಂಡುಬಂದಲ್ಲಿ ಅಂತಹ ಪಡಿತರ ಚೀಟಿದಾರರಿಗೆ ವಿತರಿಸಲಾದ ಆಹಾರ ಧಾನ್ಯಗಳಿಗೆ ಮುಕ್ತ ಮಾರುಕಟ್ಟೆ ದರಕ್ಕೆ ದಂಡ ವಿಧಿಸಲಾಗುವುದು ಮತ್ತು ಸದರಿ ಪಡಿತರ ಚೀಟಿಯನ್ನು ಆರು ತಿಂಗಳ ಅವಧಿಗೆ ಅಮಾನತ್ತುಗೊಳಿಸಲಾವುದೆಂದು ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಾಲ್ಮೀಕಿ ನಾಯಕ ಮಹಾಸಭಾ ರಾಯಚೂರು ನಗರ ಘಟಕಕ್ಕೆ ಈರೇಶ ನಾಯಕ ಅಧ್ಯಕ್ಷರಾಗಿ ನೇಮಕ



ಧೈರ್ಯದ ದಾರಿ

**ಮಾನ್ವಿ,ಜ.16–** ಪಟ್ಟಣದ ಟಿಎಪಿಎಂಸಿಎಸ್ ಯಲ್ಲಿ ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾ ರಾಯಚೂರು ಜಿಲ್ಲಾ ಘಟಕದ ಅಧೀನದಲ್ಲಿರುವ ರಾಯಚೂರು ನಗರ ಘಟಕದ ಅಧ್ಯಕ್ಷರಾಗಿ ಈರೇಶ ನಾಯಕ (ರಾಯಚೂರು) ಅವರನ್ನು ನೇಮಕ ಮಾಡಲಾಗಿದೆ. ಈ ಕುರಿತು ಜಿಲ್ಲಾ ಅಧ್ಯಕ್ಷರಾದ ಬಿ. ರಾಮಣ್ಣ ನಾಯಕ ಅವರು ಅಧಿಕೃತ ಆದೇಶ ಹೊರಡಿಸಿದ್ದಾರೆ.

ಆದೇಶದಲ್ಲಿ, ನೂತನ ಅಧ್ಯಕ್ಷರು ಸಂಘದ ಎಲ್ಲಾ ತತ್ವಸಿದ್ಧಾಂತಗಳಿಗೆ ಬದ್ಧರಾಗಿ ಕಾರ್ಯನಿರ್ವ ಹಿಸಬೇಕೆಂದು ಸೂಚಿಸಿ, ಸಮಾಜದ ಶೈಕ್ಷಣಿಕ, ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗಾಗಿ ಶ್ರಮಿಸುವುದರ ಜೊತೆಗೆ ಸಂಘಟನೆಯ ಬಲವರ್ಧನೆಗೆ ಸಕ್ರಿಯವಾಗಿ ಕೈಜೋಡಿಸಬೇಕೆಂದು ತಿಳಿಸಲಾಗಿದೆ.

ಈ ಸಂದರ್ಭದಲ್ಲಿ ತಾಲೂಕು ಅಧ್ಯಕ್ಷರಾದ ದೇವರಾಜ್ ನಾಯಕ ಕರ್ನಾಟಕ ವಾಲ್ಮೀಕಿ ನಾಯಕ ಮಹಾ ಸಭಾ ಮಾನ್ವಿ, ಆಂಜನೇಯ ನಾಯಕ, ಹನುಮೇಶ ನಾಯಕ, ತಾಯಣ್ಣ ನಾಯಕ, ಹಂಪಯ್ಯ ನಾಯಕ, ಪರುಶುರಾಮ, ಮಹೇಶ ನಾಯಕ, ಜಯ ನಾಯಕ, ಮಂಜುನಾಥ ನಾಯಕ, ಯಲ್ಲಯ್ಯ ನಾಯಕ, ಸಬ್ಜೆಲಿ, ದೇವರಾಜ ನಾಯಕ ಜಾಗೀರ್ ಪನ್ನೂರು ಇನ್ನಿತರರು ಉಪಸ್ಥಿತರಿದ್ದರು.

ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
6360866626

# ಇಂದಿನಿಂದ ಮೂರುದಿನ ಇಬ್ರಾಹಿಂಪುರ ಸಾಯಿಬಾಬಾ ಜಾತ್ರೆ: ಮಹಾರಾಜ್ ದಿಗ್ಗಿ




**ಯಾದಗಿರಿ:ಜ.16:** ಶಹಾಪುರ ತಾಲೂಕಿನ ಇಬ್ರಾಂಪುರಲ್ಲಿ ಇಂದಿನಿಂದ ರಿಂದ ಜ. 19 ರವರೆಗೆ ಶ್ರೀ ಸಾಯಿಬಾಬಾ ಅವರ 4ನೇ ಜಾತ್ರಾ ಮಹೋತ್ಸವ ಜರುಗಲಿದೆ ಎಂದು ಮಂದಿರ ಶ್ರೀ ಸಾಯಿ ಸಿದ್ಧರಾಮ ಆಶ್ರಮದ ಮಹಾರಾಜ್ ದಿಗ್ಗಿ ತಿಳಿಸಿದ್ದಾರೆ.

ಸೋಮವಾರ ಪತ್ರಿಕಾ ಭವನದಲ್ಲಿ ಸುದ್ದಿಗೊಷ್ಠಿಯಲ್ಲಿ ಮಾತನಾಡಿದ ಅವರು, ಮಠ, ಜ.17 ರಂದು ಮಧ್ಯಾಹ್ನ 12 ಕ್ಕೆ ಉಚಿತ ಸಾಮೂಹಿಕ ವಿವಾಹ ಕಲ್ಯಾಣ ಮಹೋತ್ಸವ ಕಾರ್ಯಕ್ರಮ ನಡೆಯಲಿದೆ. ಗುರುಮಠಕಲ್ ಖಾಸಾಮಠ, ಕಡಕೊಳ ಮಡಿವಾಳೇರ ಸರೂರು, ಅಗತೀರ್ಥದ ಗುರುರೇವಣಸಿದ್ದೇಶ್ವರ ಗುರುಪೀಠ, ಚಿಗರಹಳ್ಳಿ ಮರಳುಶಂಕರ ದೇವರಪೀಠ, ಹೋತಪೇಠ, ದೊರನಹಳ್ಳಿ, ಸೂಗುರು, ಮಹಲ್ ರೋಜಾ, ಏಕದಂಡಗಿಮಠ ಶಹಾಪುರ, ಜುಬೇರ್ ಸೈಯದ್ ಷಾ ಚಾಂದ ಹುಸೈನಿ, ಗೊಬ್ಬರವಾಡಿ ಸೇರಿದಂತೆಯೇ ವಿವಿಧ ಮಠಗಳ ಶ್ರೀಗಳ ಸಾನಿಧ್ಯ ವಹಿಸುವರು.

ಶಾಸಕ ಚನ್ನಾರೆಡ್ಡಿ ಪಾಟೀಲ್, ಮಾಜಿ ಶಾಸಕ ರಾಜೂಗೌಡ ಮಾಜಿ ಶಾಸಕ ಗುರು ಪಾಟೀಲ್, ಮುಖಂಡ ಅಮೀನ್ ರೆಡ್ಡಿ ಅವರು ಉದ್ಘಾಟಿಸಲಿದ್ದಾರೆ.
ಜಿಲ್ಲಾ ಕಸಾಪ ಅಧ್ಯಕ್ಷ ಸಿದ್ದಪ್ಪ ಹೊಟ್ಟಿ, ಶರಣು ಗದ್ದುಗೆ, ಅಮಾತೆಪ್ಪ ಕಂದಕೂರ
ಸೇರಿದಂತೆ ಇತರರು ಸಾಯಿಬಾಬಾ ಮೂರ್ತಿಗೆ ಪುಷ್ಪಾರ್ಚನೆ ಮಾಡಲಿದ್ದಾರೆ.ಇನ್ನು
ಜ.18 ರಂದು ಸಂಜೆ 6 ಕ್ಕೆ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದ್ದು, ತಿಂಥಣಿ ಬ್ರಿಜ್ ಕನಕಗುರುಪೀಠ, ಅರಕೇರಾ ಸೇರಿದಂತೆಯೇ ವಿವಿಧ ಮಠಾಧೀಶರ ದಿವ್ಯ ಸಾನಿಧ್ಯದಲ್ಲಿ ಸಚಿವ ಶರಣಬಸಪ್ಪ ದರ್ಶನಾಪುರ, ಸಂಸದ ಜಿ.ಕುಮಾರ ನಾಯಕ, ಮಾಜಿ ಸಚಿವ ಶಿವನಗೌಡ ನಾಯಕ, ಕೆಕೆಆರ್ ಡಿಬಿ ಅಧ್ಯಕ್ಷ ಡಾ.ಅಜಯಸಿಂಗ ಅವರು ಉದ್ಘಾಟನೆ ಮಾಡಲಿದ್ದಾರೆ.

ವಿಶೇಷ ಆಹ್ವಾನಿತರಾಗಿ ಕನ್ನಡದ ನಟ ಡಾಲಿ ಧನಂಜಯ, ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌದರಿ ಹಾಗೂ ನಿಕೇತ್ ರಾಜ್ ಮೌರ್ಯ ಭಾಗವಹಿಸಲಿದ್ದಾರೆ.

ಪ್ರೋ.ಜೆ.ಎಂ.ತಿಪ್ಪೇಸ್ವಾಮಿ, ಡಿಸಿ ಹರ್ಷಲ್ ಬೋಯರ್, ಎಸ್ ಪಿ ಪೃಥ್ವಿಕ್ ಶಂಕರ್ ಇತರೇ ಗಣ್ಯರು ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಜ.19 ರಂದು ಮಧ್ಯಾಹ್ನ 2 ಕ್ಕೆ ಕುಸ್ತಿ ಪಂದ್ಯಾವಳಿ ನಡೆಯಲಿದೆ. ಕಳೆದ ನಾಲ್ಕು ವರ್ಷಗಳಿಂದ ಈ ಸಂಭ್ರಮೋತ್ಸವ ನಡೆಸುತ್ತಾ ಬರಲಾಗುತ್ತಿದೆ. ದೇವಸ್ಥಾನದಲ್ಲಿ ನಿತ್ಯವೂ ವಿಶೇಷ, ಅನ್ನದಾಸೋಹ ನಡೆ-ಯುತ್ತಿದೆ. ಮಿನಿ ಶಿರಡಿಯಂತಾಗಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಮಲ್ಲಣ್ಣ ಐಕೂರ್, ಶ್ರೀಧರ ಸಾಹುಕಾರ, ಖಾಜಾ ಮೈನೋದ್ದಿನ್, ಮಾಳಪ್ಪ ಯಾದವ್, ಶಿವು ಬೆಳಗುಂದಿ, ಭೀಮಾಶಂಕರ ದೊರನಹಳ್ಳಿ, ನರೇಶ ಗಿರೆಪ್ಪನೊರ, ಅಲಿಸಾಬ್, ಶಿವು ಪಾಟೀಲ್, ಭೀಮರೆಡ್ಡಿ ಯಾದವ್,ಮಾಳಿಂಗರಾಯ ಕಂದಳ್ಳಿ, ಹೊನ್ನಪ್ಪ ಯಡ್ಡಳ್ಳಿ, ಬೀರೇಶ ಚಿರತೆನೂರ ಇದ್ದರು.

# ಸಿಯುಕೆಗೆ ಐಇಇಇ ಮ್ಯಾಪ್‌ಕಾನ್ ಸಮ್ಮೇಳನದಲ್ಲಿ ಜಾಗತಿಕ ಮನ್ನಣೆ



**ಕಲಬುರಗಿ,ಜ.16**:ಕೇರಳದ ಕೊಚ್ಚಿಯ ಗ್ರ್ಯಾಂಡ್ ಹಯಾನ್‌ನಲ್ಲಿ ನಡೆದ ವಿಶ್ವದ ಅತಿದೊಡ್ಡ ರೇಡಿಯೋ ಫ್ರೀಕ್ವೆನ್ಸಿ ಮತ್ತು ಮೈಕ್ರೋವೇವ್ ಸಮ್ಮೇಳನಗಳಲ್ಲಿ ಒಂದಾದ ಐಇಇಇ (ಇನ್ಸ್ಟಿಟ್ಯೂಟ್ ಆಫ್ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ) ಮ್ಯಾಪ್‌ಕಾನ್2025 ಸಮ್ಮೇಳನದಲ್ಲಿ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ ಗಮನಾರ್ಹ ಜಾಗತಿಕ ಮನ್ನಣೆಯನ್ನು ಗಳಿಸಿದೆ.

ಈ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ 45 ದೇಶಗಳಿಂದ, 1,800 ಕ್ಕೂ ಹೆಚ್ಚು ಪ್ರತಿನಿಧಿಗಳು, ಪ್ರಪಂಚದಾದ್ಯಂತದ ಪ್ರಮುಖ ವಿಶ್ವವಿದ್ಯಾಲಯಗಳ, ಸಂಶೋಧನಾ ಪ್ರಯೋಗಾಲಯಗಳ ಮತ್ತು ಕೈಗಾರಿಕೆಗಳಿಂದ 250 ಕ್ಕೂ ಹೆಚ್ಚು ಅಂತರರಾಷ್ಟ್ರೀಯ ತಜ್ಞರು ಇದರಲ್ಲಿ ಭಾಗವಹಿಸಿದರು. ಇಸ್ರೋ ಅಧ್ಯಕ್ಷ ಶ್ರೀ ವಿ. ನಾರಾಯಣನ್, ಡಿಆರ್‌ಡಿಒ ಮಹಾನಿರ್ದೇಶಕ ಡಾ. ಬಿ. ಕೆ. ದಾಸ್, ಹಿರಿಯ ನಾಸಾ ವಿಜ್ಞಾನಿ ಡಾ. ಗೌತಮ ಚಟ್ಟೋಪಾಧ್ಯಾಯ ಸೇರಿದಂತೆ ಪ್ರಮುಖ ಗಣ್ಯರು ಸಮ್ಮೇಳನವನ್ನು ಉದ್ಘಾಟಿಸಿದರು.
ಕರ್ನಾಟಕದ ಕೇಂದ್ರೀಯ ವಿಶ್ವವಿದ್ಯಾಲಯವು ಪ್ರತಿಷ್ಠಿತ "ಅತ್ಯುತ್ತಮ ಮತ್ತು ದೊಡ್ಡ ಐಇಇಇ-ಮೈಕ್ರೋವೇವ್ ಥಿಯರಿ ಮತ್ತು ಟೆಕ್ನಾಲಜಿಕಲ್ ಸೊಸೈಟಿ ವಿದ್ಯಾರ್ಥಿ ಶಾಖೆ ಪ್ರಶಸ್ತಿಯನ್ನು ಪಡೆದುಕೊಂಡಿದೆ. ಇದು ವಿಶ್ವಾದ್ಯಂತ ಹನ್ನೆರಡು ದೊಡ್ಡ ಶಾಖೆಗಳಲ್ಲಿ ಒಂದಾಗಿದೆ. ಇದು ತಾಂತ್ರಿಕ ಚಟುವಟಿಕೆಗಳು ಮತ್ತು ಅಂತರರಾಷ್ಟ್ರೀಯ ಸಂಶೋಧನೆಯ ಭಾಗವಹಿಸುವಿಕೆಯಲ್ಲಿ ವಿಶ್ವವಿದ್ಯಾಲಯದ ಶ್ರೇಷ್ಠತೆಯನ್ನು ಎತ್ತಿ ತೋರಿಸುತ್ತದೆ.

ಎಲೆಕ್ಟ್ರಾನಿಕ್ಸ್ ಮತ್ತು ಸಂವಹನ ಎಂಜಿನಿಯರಿಂಗ್ ನಿಕಾಯದ ಡೀನ್ ಪ್ರೋ ಪರಮೇಶ ಮತ್ತು ಡಾ. ನೃಸಿಂಗ ಪ್ರಧಾನ್ ಅವರು ವಿದ್ಯಾರ್ಥಿಗಳೊಂದಿಗೆ ಸಮ್ಮೇಳನದಲ್ಲಿ ಭಾಗವಹಿಸಿದರು. ಡಾ. ಪ್ರಧಾನ್ ಅವರು ಐಇಇಇ ಮ್ಯಾಪ್‌ಕಾನ್2025 ರ ಕೋರ್ ತಂಡದ ಸಂಘಟಕರಾಗಿದ್ದಾರೆ. ಅವರ ಕೊಡುಗೆಗಳನ್ನು ಗುರುತಿಸಿ ಅವರಿಗೆ ರೂ1.52 ಲಕ್ಷದ ಪ್ರಯಾಣ ಅನುದಾನ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

ಸಿಯುಕೆಯಿಂದ ವಿದ್ಯಾರ್ಥಿಗಳ ಭಾಗವಹಿಸುವಿಕೆ ಅತ್ಯುತ್ತಮವಾಗಿತ್ತು, ಅತ್ಯಂತ ಸ್ಪರ್ಧಾತ್ಮಕ ರಾಷ್ಟ್ರೀಯ ಮಟ್ಟದ ಆಯ್ಕೆ ಪ್ರಕ್ರಿಯೆಯಲ್ಲಿ ಹಲವಾರು ಪ್ರಮುಖ ಸಂಸ್ಥೆಗಳ ಅಭ್ಯರ್ಥಿಗಳನ್ನು ಮೀರಿಸಿ 18 ವಿದ್ಯಾರ್ಥಿಗಳು ಸಮ್ಮೇಳನದ ಸ್ವಯಂಸೇವಕರಾಗಿ ಆಯ್ಕೆಯಾದರು. ಆಯ್ಕೆಯಾದ ವಿದ್ಯಾರ್ಥಿಗಳು ಉಚಿತ ನೋಂದಣಿ, ವಸತಿ, ಅಧಿಕೃತ ಬ್ಲೇಜರ್, ಟ್ರಾಲಿ ಬ್ಯಾಗ್, ಪ್ರಯಾಣ ಮರುಪಾವತಿ ಮತ್ತು ಉಡುಗೊರೆ ಕೂಪರ್ಸಗಳನ್ನು ಪಡೆದರು. ಅಲ್ಲದೆ ಸಿಯುಕೆಯ ವಿದ್ಯಾರ್ಥಿನಿ ಕುಮಾರಿ ಸೌಜನ್ಯ ಅವರು ಸಮ್ಮೇಳನದಲ್ಲಿ ಭಾಗವಹಿಸಲು ರೂ.80,000 ಗಳ ಸಹಾಯಧನ ಪ್ರಶಸ್ತಿಯನ್ನು ಪಡೆದರು.

ಸಮ್ಮೇಳನದ ನಂತರ, ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಗೌರವಾನ್ವಿತ ಕುಲಪತಿ ಪ್ರೋ. ಬಟ್ಟು ಸತ್ಯನಾರಾಯಣ ಅವರನ್ನು ಭೇಟಿ ಮಾಡಿ ಪ್ರಶಸ್ತಿಗಳು ಮತ್ತು ಫಲಿತಾಂಶಗಳ ಕುರಿತು ವಿವರಿಸಿದರು. ಕುಲಪತಿಗಳು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು ಮತ್ತು "ವಿಕಸಿತ ಭಾರತ 2047" ಸಾಧನೆಗೆ ಕೊಡುಗೆ ನೀಡಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿದರು.
ಸಿಯುಕೆಯ ವಿದ್ಯಾರ್ಥಿಗಳಿಗೆ ಅವಕಾಶವನ್ನು ಒದಗಿಸಿದ್ದಕ್ಕಾಗಿ ಐಇಇಇ ಮ್ಯಾಪ್‌ಕಾನ್ ಸಂಘಟಕರಿಗೆ ಪ್ರೋ ಬಟ್ಟು ಸತ್ಯನಾರಾಯಣ ಧನ್ಯವಾದ ಹೇಳಿದರು ಮತ್ತು ವಿಶ್ವವಿದ್ಯಾಲಯದ ಜಾಗತಿಕ ಸ್ಥಾನಮಾನವನ್ನು ಹೆಚ್ಚಿಸುವಲ್ಲಿ ಅವರ ಉಪಕ್ರಮಕ್ಕಾಗಿ ಪ್ರೋ. ಪರಮೇಶ ಮತ್ತು ಡಾ. ಪ್ರಧಾನ್ ಅವರ ಸೇವೆಯನ್ನು ಶ್ಲಾಘಿಸಿದರು.

# ಬಸವೇಶ್ವರ ವೃತ್ತದ ಅಭಿವೃದ್ಧಿಗೆ ಬದ್ಧ ಸಚಿವ ಡಾ.ಶರಣಪ್ರಕಾಶ ಪಾಟೀಲ್



**ಸೇಡಂ,ಜ,16:**ಬಹು ದಿನಗಳ ಬೇಡಿಕೆ ಹಾಗೂ ನಗರ ಸೌಂದರ್ಯಕ್ಕೆ ಪುಷ್ಠಿ ನೀಡುವಂತಹ ಬಸವೇಶ್ವರ ವೃತ್ತದ ಅಭಿವೃದ್ಧಿಗೆ ಬದ್ಧವಾಗಿದ್ದೇನೆ. ಬೇಕಾದ ಕ್ರಮಗಳನ್ನು ಅನುಸರಿಸಿ ದುರಸ್ತಿಕೈಗೊಂಡು ಬಸವೇಶ್ವರ ವೃತ್ತವನ್ನು ಅಭಿವೃದ್ಧಿಸಲಾಗುವುದು ಎಂದು ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರಾದ ಡಾ.ಶರಣಪ್ರಕಾಶ ಪಾಟೀಲ್ ಊಡಗಿ ಹೇಳಿದರು.ಇಲ್ಲಿನ ಬಸವೇಶ್ವರ ವೃತ್ತಕ್ಕೆ ಬೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿ ವಾಸ್ತುಶಿಲ್ಪಿ ಬಸರಾಜಪ್ಪ ಖಂಡೇರಾವ್ ಅವರೊಂದಿಗೆ ಚರ್ಚಿಸಿ ಮಾತನಾಡಿದ ಅವರು, ಸೇಡಂ ಪಟ್ಟಣದ ಹೃದಯ ಭಾಗದಲ್ಲಿ ಸ್ಥಾಪಿತವಾಗಿರುವ ಅಣ್ಣ ಬಸವಣ್ಣ ಅವರ ಅಶ್ವಾರೂಢ ಮೂರ್ತಿ ಹಾಗೂ ಅದರ ಸುತ್ತಲಿನ ಸ್ಥಳದ ಸೌಂದರ್ಯ ಹೆಚ್ಚಿಸಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.ತಜ್ಞ ಖಂಡೇರಾವ್ ಅವರೊಟ್ಟಿಗೆ ಚರ್ಚಿಸಿದಂತೆ ಫೂರಿಂಗ್, ಹಿಂಭಾಗ ಗೋಡೆ ಹಾಗೂ ಬಸವೇಶ್ವರ ಮೂರ್ತಿ ಸ್ಥಳದ ಸುತ್ತಲಿನ ಗ್ರ್ಯಾನೇಟ್ ದುರಸ್ತಿ ಕೈಗೊಳ್ಳಬೇಕಾಗಿದೆ ಎಂದರು.ಬಸವೇಶ್ವರ ವೃತ್ತದ ರಸ್ತೆ ನಡುವೆ ಇರುವ ಬಾಣಂತಿ ಕಂಬದ ಸುತ್ತಲೂ ವಾಹನಗಳು ಅಂತರ ಕಾಯ್ದು ಸಂಚರಿಸಲು ಒಂದೂವರೆ ಅಡಿ ವೃತ್ತಾಕಾರದ ಗಾರ್ಡನ್ ಸ್ಥಳವನ್ನು ನಿರ್ಮಿಸುವ ಕುರಿತು ಸೂಚಿಸಿಲಾಗಿದೆ. ಈಗಿರುವ ಪಾಕಿರ್‌ಂಗ್ ಟೈಲ್ಸ್ ತೆಗೆದು ಸಿಸಿ ರಸ್ತೆ ಕಾಮಗಾರಿ ಕುರಿತು ಯೋಜಿಸಲಾಗಿದೆ ಎಂದು ಹೇಳಿದರು.


ಈ ವೇಳೆಯಲ್ಲಿ ರಾಜ್ಯ ಕೃಷಿಕ ಸಮಾಜದ ರಾಜ್ಯ ಪ್ರತಿನಿಧಿ ಬಸವರಾಜ ಪಾಟೀಲ್ ಊಡಗಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವಶರಣರೆಡ್ಡಿ ಪಾಟೀಲ, ನಗರ ಯೋಜನಾ ಪ್ರಾಧಿಕಾರ ಅಧ್ಯಕ್ಷ ವಿಶ್ವನಾಥ ಪಾಟೀಲ ಬೊಮ್ಮನಹಳ್ಳಿ,ಕೃಷಿ ಸಮಾಜದ ಅಧ್ಯಕ್ಷ ಬಸವರಾಜ ರೇವಗೊಂಡ, ಪುರಸಭೆ ಮಾಜಿ ಅಧ್ಯಕ್ಷ ವೀರೇಂದ್ರ ಪಾಟೀಲ್ ರುದ್ನೂರು, ಸಚಿವರ ಆಪ್ತ ಸಹಾಯಕರಾದ ಆನಂದ್ ಪೂಜಾರಿ, ಕಾಂಗ್ರೆಸ್ ಪಕ್ಷದ ಮುಖಂಡರುಗಳಾದ ಶಿವರುದ್ರ ಕೊಳಕುರು, ಮಹೇಶ್ ಪಾಟೀಲ್ ತರನಳ್ಳಿ, ಚನ್ನಬಸಪ್ಪ ಹಾಗರಗಿ,ಅಶೋಕ್ ರೆಡ್ಡಿ ಕೆರಳ್ಳಿ, ಸತೀಶ್ ಪೂಜಾರಿ,ಸಂತೋಷ ತಳವಾರ,ಶ್ರೀನಿವಾಸ,ಸೇರಿದಂತೆ ಹಲವರು ಉಪಸ್ಥಿತರಿದ್ದರು.
ನಗರ ಸೌಂದರ್ಯಕ್ಕೆ ಬೇಕಾದ ಅಭಿವೃದ್ಧಿ ಕೆಲಸಗಳನ್ನು ಮುಂದುವರೆಸಿಕೊಂಡು ಹೋಗಲಾಗುತ್ತದೆ. ಬಸವೇಶ್ವರ ವೃತ್ತ ಸೇರಿದಂತೆ ಅಂಬಿಗ ಚೌಡಯ್ಯ, ಸಂಗೊಳ್ಳಿ ರಾಯಣ್ಣ ಮೂರ್ತಿ ಸ್ಥಳದ ಅಭಿವೃದ್ಧಿಯನ್ನು ಕೈಗೊಳ್ಳುಯುವ ಕುರಿತು ವಾಸ್ತುಶಿಲ್ಪಿಯೊಂದಿಗೆ ಚರ್ಚಿಸಿದ್ದೇನೆ.ಬರುವ ದಿನಗಳಲ್ಲಿ ಬೇಕಾದ ಅನುದಾನ ಬಗ್ಗೆ ಸೂಕ್ತ ನಿರ್ಧಾರ ತೆಗೆದುಕೊಂಡು ಈ ಮೂರು ಸ್ಥಳಗಳ ಅಭಿವೃದ್ಧಿ ಪಡಿಸುತ್ತೇನೆ.

ಡಾ.ಶರಣಪ್ರಕಾಶ ಪಾಟೀಲ್ ಊಡಗಿ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರು ಕರ್ನಾಟಕ ಸರ್ಕಾರ

# ಜ.19 ರಿಂದ ವೀರುಪಾಕ್ಷೇಶ್ವರ ಜಾತ್ರಾ ಮಹೋತ್ಸವ

**ಭಾಲ್ಕಿ:ಜ.16:** ತಾಲೂಕಿನ ಮೇಹಕರ ಗ್ರಾಮದಲ್ಲಿ ಜ.19 ರಿಂದ ಫೆ.1ರ ವರೆಗೆ ಶ್ರೀ ಗುರು ವೀರುಪಾಕ್ಷೇಶ್ವರ ಜಾತ್ರಾ ಮಹೋತ್ಸವ ಜರುಗಲಿದೆ ಎಂದು ಪೀಠಾಧಿಪತಿ ರಾಜೇಶ್ವರ ಶಿವಾಚಾರ್ಯರು ತಿಳಿಸಿದ್ದಾರೆ.ರಂಭಾಪುರಿ ಜಗದ್ಗುರುಗಳ ದಿವ್ಯ ಸಾನಿಧ್ಯದಲ್ಲಿ ಇಷ್ಟಲಿಂಗ ಮಹಾಪೂಜೆ ಹಾಗೂ ಧರ್ಮಸಭೆ ಕಾರ್ಯಕ್ರಮಗಳು ನಡೆಯಲಿವೆ.ಜ. 21 ರಂದು ರಂಭಾಪುರಿ ಜಗದ್ಗುರುಗಳ 35ನೇ ವರ್ಷದ ಪೀಠಾರೋಹಣ ವರ್ಧಂತಿ ಮಹೋತ್ಸವವನ್ನು ಆಚರಿಸಲಾಗುತ್ತದೆ. ಜ22 ರಿಂದ ಮಹಾರುದ್ರಾಭಿಷೇಕ ಹಾಗೂ ಜಪಯಜ್ಞ ಕಾರ್ಯಕ್ರಮಗಳು ನಡೆಯಲಿದ್ದು, ಫೆ.1 ರಂದು ಶ್ರೀ ಗುರು ವೀರುಪಾಕ್ಷೇಶ್ವರ ದೇವರ ಅದ್ದೂರಿ ಪಲ್ಲಕ್ಕಿ ಉತ್ಸವದೊಂದಿಗೆ ಜಾತ್ರಾ ಮಹೋತ್ಸವಕ್ಕೆ ಸಮಾರೋಪ ನಡೆಯಲಿದೆ.ಈ ಐತಿಹಾಸಿಕ ಜಾತ್ರಾ ಮಹೋತ್ಸವದಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಭಕ್ತಾದಿಗಳು ಭಾಗವಹಿಸುವ ನಿರೀಕ್ಷೆಯಿದೆ. ರಂಭಾಪುರಿ ಜಗದ್ಗುರುಗಳು ವೀರಶೈವ ಧರ್ಮದ ಆಧ್ಯಾತ್ಮಿಕ ದಿಕ್ಕುದೀಪರಾಗಿದ್ದಾರೆ. ಅವರ ದಿವ್ಯ ಸಾನಿಧ್ಯದಲ್ಲಿ ನಡೆಯುವ ಇಷ್ಟಲಿಂಗ ಮಹಾಪೂಜೆ ಹಾಗೂ ಧರ್ಮಸಭೆಗಳು ಸಮಾಜದಲ್ಲಿ ಶಾಂತಿ, ಸೌಹಾರ್ದತೆ ಮತ್ತು ಧರ್ಮಬೋಧನೆಯನ್ನು ಬಲಪಡಿಸುತ್ತವೆ. ಮೇಹಕರ ಗ್ರಾಮದ ಶ್ರೀ ಗುರು ವೀರುಪಾಕ್ಷೇಶ್ವರ ಜಾತ್ರಾ ಮಹೋತ್ಸವವು ಭಕ್ತಿ, ಶಿಸ್ತು ಮತ್ತು ಮಾನವೀಯ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಮಹತ್ವದ ಜಾತ್ರೆಯಾಗಿದ್ದು ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಪುನೀತರಾಗಬೇಕ ಎಂದು ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

# ನಂಜನಗೂಡು ತಹಶೀಲ್ದಾರ್ ಕಛೇರಿಗೆ ರೈತರ ಮುತ್ತಿಗೆ



**ನಂಜನಗೂಡು: ಜ.16:-** ಬಡ ರೈತರಿಗೆ ಸಾಗುವಳಿ ಪತ್ರವನ್ನು ತಾಲೂಕು ಆಡಳಿತ ನೀಡುತ್ತಿಲ್ಲ ಎಂದು ಆರೋಪಿಸಿ ರೈತ ಸಂಘ ಮತ್ತು ಹಸಿರು ಸೇನೆಯ ರೈತರು ನಂಜನಗೂಡಿನ ತಾಲ್ಲೂಕು ಕಛೇರಿಗೆ ಮುತ್ತಿಗೆ ಹಾಕಿ ನಿದ್ರಿಸುವ ಮೂಲಕ ಪ್ರತಿಭಟಿಸಿದರು.ರೈತ ಸಂಘ ಮತ್ತು ಹಸಿರು ಸೇನೆಯ ರೈತರು ನಂಜನಗೂಡು ನಗರದ ತಾಲ್ಲೂಕು ಆಡಳಿತ ಭವನದ ತಹಶೀಲ್ದಾರ್ ಕಛೇರಿಯ ಮುಂಭಾಗದಲ್ಲಿ ಜಮಾಯಿಸಿ, ಸರ್ಕಾರ ಮತ್ತು ತಾಲ್ಲೂಕು ಆಡಳಿತದ ವಿರುದ್ಧ ದಿಕ್ಕಾರದ ಘೋಷಣೆಗಳನ್ನು ಕೂಗುತ್ತ ಆಕ್ರೋಶ ವ್ಯಕ್ತಪಡಿಸಿದರು.ರೈತ ಸಂಘ ಮತ್ತು ಹಸಿರು ಸೇನೆಯ ರಾಜ್ಯ ಕಾರ್ಯಾಧ್ಯಕ್ಷ ಟಿ.ಆರ್ ವಿದ್ಯಾಸಾಗರ್ ಮಾತನಾಡಿ, ಆಡಳಿತ ವ್ಯವಸ್ಥೆ ಉಳುಮೆ ಮಾಡುತ್ತಿರುವ ರೈತರಿಗೆ ವಂಚನೆ ಮಾಡುತ್ತಿದ್ದಾರೆ. ಉಳುವವನೇ ಭೂಮಿಯ ಒಡೆಯ ಎಂದು ಸರ್ಕಾರ ಹೇಳಿತ್ತು. ಆದರೆ, ಉಳ್ಳವರು ಭೂಮಿಯ ಒಡೆಯನಾಗಿದ್ದಾರೆ.

ಸರ್ಕಾರಿ ಜಮೀನುಗಳಲ್ಲಿ ಉಳುಮೆ ಮಾಡುತ್ತಿರುವವರಿಗೆ ಸರ್ಕಾರ ಸಾಗುವಳಿ ಪತ್ರವನ್ನು ನೀಡಬೇಕು. ಅರ್ಹ ರೈತರಿಗೆ ಬಗರ್ ಹುಕುಂ ಸಾಗುವಳಿ ಪತ್ರವನ್ನು ನೀಡುತ್ತಿಲ್ಲ. ತಾಲ್ಲೂಕಿನ ಸೂರಹಳ್ಳಿ ಗ್ರಾಮದ ಸರ್ವೆ ನಂ. 269 ರಲ್ಲಿ 316 ಎಕರೆ ಪ್ರದೇಶದಲ್ಲಿ ನೂರಾರು ರೈತರು ಸುಮಾರು 200 ವರ್ಷಗಳಿಂದಲೂ ಜಮೀನು ಮಾಡಿಕೊಂಡು ಬೆಳೆಯನ್ನು ಬೆಳೆಯುತ್ತಿದ್ದಾರೆ. ಆದರೆ, ಬಗರ್ ಹುಕುಂ ಸಾಗುವಳಿ ಪತ್ರ ಮಾತ್ರ ನೀಡಿಲ್ಲ. ಸಾಗುವಳಿ ಮಾಡಲು ಲಂಚ ನೀಡದೆ ಇರುವುದಕ್ಕೆ ಅಧಿಕಾರಿಗಳು ಇದನ್ನು ಸರ್ಕಾರಿ ಗೋಮಾಳ ಎಂದು ಆರ್ ಟಿ ಸಿ ಯಲ್ಲಿ ನಮೂದಿಸುತ್ತಾರೆ.
ಹಣ ಇದ್ದವರಿಗೆ ಸಾಗುವಳಿ ಪತ್ರವನ್ನು ನೀಡುತ್ತಾರೆ ಎಂದು ಆರೋಪಿಸಿದರು. ತಾಲ್ಲೂಕು ಆಡಳಿತ ರೈತ ವಿರೋಧಿ ನೀತಿಯನ್ನು ಅನುಸರಿಸುತ್ತಿದೆ. ಸಿಎಂ ರವರು ಪ್ರತಿನಿಧಿಸುವ ಕ್ಷೇತ್ರದಲ್ಲಿ ಅಧಿಕಾರಿಗಳು ಸ್ಪಂದಿಸುತ್ತಿಲ್ಲ. ತಹಶೀಲ್ದಾರ್ ರವರು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಸಾಮಾನ್ಯ ಜನರಿಗೆ ತಹಶೀಲ್ದಾರ್ ಸಿಗುತ್ತಿಲ್ಲ. ಸಂಜೆ ಮೇಲೆ ಕಛೇರಿಗೆ ಬರುತ್ತಿದ್ದಾರೆ ಇದರಿಂದ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗಿದೆ. ಕೂಡಲೇ ತಹಶೀಲ್ದಾರ್ ರವರನ್ನು ತಾಲ್ಲೂಕಿನಿಂದ ವರ್ಗಾವಣೆ ಮಾಡುವಂತೆ ಆಗ್ರಹಿಸಿದರು.

ಇನ್ನೂ ಸರ್ಕಾರಿ ಕರಾಬ್ ಇರೋದು, ಸರ್ಕಾರಿ ಗೋಮಾಳ ಆಗುತ್ತದೆ. ಬಡವರಿಗೆ ಸಾಗುವಳಿ ಪತ್ರ ಸಿಗುತ್ತಿಲ್ಲ. ನಂಜನಗೂಡಿನಲ್ಲಿರುವ ಕಂದಾಯ ಅಧಿಕಾರಿಗಳನ್ನು ಈ ಕೂಡಲೇ ತಾಲ್ಲೂಕಿನಿಂದ ಗೇಟ್ ಪಾಸ್ ನೀಡಬೇಕು ಎಂದು ಒತ್ತಾಯಿಸಿದರು.

ಅನಿರ್ದಿಷ್ಟಾವಧಿ ಹೋರಾಟಕ್ಕೆ ಕರೆ: ನಂಜನಗೂಡು ತಾಲ್ಲೂಕಿನಲ್ಲಿ ತಾಲ್ಲೂಕು ಆಡಳಿತ ಸಂಪೂರ್ಣವಾಗಿ ವಿಫಲವಾಗಿದ್ದು, ಸಾರ್ವಜನಿಕರ ಕೆಲಸ ಕಾರ್ಯಗಳು ಆಗುತ್ತಿಲ್ಲ. ಅಧಿಕಾರಿಗಳು ಕೈಗೆ ಸಿಗುತ್ತಿಲ್ಲ. ಕಳೆದ ಮೂರು ವರ್ಷಗಳಿಂದಲೂ ಯಾವುದೇ ಕೆಲಸಗಳು ನಡೆಯುತ್ತಿಲ್ಲ. ಸಿ.ಎಂ ಕ್ಷೇತ್ರವಾದರೂ ಯಾವುದೇ ಪ್ರಯೋಜನವಾಗಿಲ್ಲ. ತುಕ್ಕು ಹಿಡಿಯುತ್ತಿರುವ ತಾಲ್ಲೂಕು ಆಡಳಿತದ ವಿರುದ್ಧ ಮುಂದಿನ ದಿನಗಳಲ್ಲಿ ಅನಿರ್ದಿಷ್ಟಾವಧಿ ಆಹೋರಾತ್ರಿ ಧರಣಿ ನಡೆಸಬೇಕಾಗುತ್ತದೆ.
ನಿದ್ರಿಸುತ್ತಿರುವ ತಾಲ್ಲೂಕು ಆಡಳಿತವನ್ನು ನಾವು ಎಚ್ಚರಿಸಬೇಕಾಗಿದೆ. ವರ್ಗಾವಣೆಯಾಗದೆ ತಾಲ್ಲೂಕಿನಲ್ಲಿಯೇ ಜಾಂಡಯೂರಿರುವ ಅಧಿಕಾರಿಗಳಿಗೆ ಗೇಟ್ ಪಾಸ್ ನೀಡುವ ತನಕ ಹೋರಾಟ ಮುಂದುವರಿಸುತ್ತೇವೆ ಎಂದು ರೈತ ಸಂಘ ಮತ್ತು ಹಸಿರು ಸೇನೆಯ ರಾಜ್ಯ ಕಾರ್ಯಾಧ್ಯಕ್ಷ ವಿದ್ಯಾಸಾಗರ್ ಎಚ್ಚರಿಕೆ ನೀಡಿದ್ದಾರೆ.
ಪ್ರತಿಭಟನೆಯಲ್ಲಿ ರೈತ ಸಂಘ ಮತ್ತು ಹಸಿರು ಸೇನೆಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಇಮ್ಮಾವು ರಘು, ತಾಲ್ಲೂಕು ಅಧ್ಯಕ್ಷ ಸತೀಶ್ ರಾವ್, ಮಹಿಳಾ ಘಟಕದ ಅಧ್ಯಕ್ಷೆ ಶ್ವೇತಾ, ಮಹದೇವನಾಯಕ, ಮೋಹನ್, ರಮೇಶ್ ನಾಯಕ, ಶಿವಣ್ಣ, ಮಾದೇಗೌಡ, ಮಲ್ಲೇಶ್, ಮಹದೇವಸ್ವಾಮಿ, ಸಿದ್ದರಾಜು, ರಾಜಣ್ಣ, ಶಂಕರನಾಯಕ ಸೇರಿದಂತೆ ರೈತರು ಹಾಜರಿದ್ದರು.

# ಶರಣರ ಇತಿಹಾಸ, ವಚನಗಳ ಅಧ್ಯಯನ ಮಾಡಬೇಕಾಗಿದೆ

**ನಂಜನಗೂಡು: ಜ.16:-** 12ನೇ ಶತಮಾನ ಬಹಳ ಪ್ರಸಿದ್ಧಿ ಪಡೆದಿರುವ ಶತಮಾನವಾಗಿದೆ. ಹಲವಾರು ಶರಣರು ವಚನ ಸಾಹಿತ್ಯಗಳನ್ನು ಕೊಡುಗೆ ನೀಡಿದ್ದಾರೆ. ಶರಣರ ಇತಿಹಾಸ ಹಾಗೂ ವಚನಗಳನ್ನು ಅಧ್ಯಯನ ಮಾಡಬೇಕಾಗಿದೆ ಎಂದು ಬಸವ ಯೋಗಿ ತಿಳಿಸಿದರು.

ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿ ಹಾಗೂ ಸಮಾಜದ ಸಂಘಟನೆ ವತಿಯಿಂದ ಬುಧವಾರ ತಾಲೂಕು ಕಚೇರಿ ಆವರಣದಲ್ಲಿ ಶ್ರೀ ಶಿವಯೋಗಿ ಸಿದ್ದರಾಮೇಶ್ವರ ಜಯಂತಿ ಕಾರ್ಯಕ್ರಮದಲ್ಲಿ ಮುಖ್ಯ ಭಾಷಣಕಾರರಾಗಿ ಮಾತನಾಡಿದರು. ಸಿದ್ದರಾಮೇಶ್ವರರು 1840 ವಚನಗಳನ್ನು ರಚನೆ ಮಾಡಿದ್ದರು. ಆದರೆ ವಚನಗಳು ಸರಿಯಾಗಿ ಸಿಗಲಿಲ್ಲ. ಇತ್ತೀಚೆಗೆ 23,000 ವಚನಗಳು ಸಿಕ್ಕಿದ್ದು ಇದರಲ್ಲಿ ಸಿಂಹ ಪಾಲು ಸಿದ್ದರಾಮೇಶ್ವರ ರವರದ್ದಾಗಿದೆ. ಮೂಲತಹ ಮರಾಠಿಗರಾಗಿದ್ದರು ಕೂಡ ವಚನಗಳನ್ನು ಕನ್ನಡದಲ್ಲಿ ರಚನೆ ಮಾಡಿದ್ದು, ಯಾವುದೇ ಶರಣರು ಒಂದು ಜಾತಿಗೆ ಸೀಮಿತ ಮಾಡಬಾರದು ಎಂದರು.

ಬಳಿಕ ತಾಲೂಕು ದಂಡಾಧಿಕಾರಿ ಶಿವಕುಮಾರ್ ಹಾಸನೂರು ಮಾತನಾಡಿ, 12ನೇ ಶತಮಾನದಲ್ಲಿ ಹಲವಾರು ವಚನಕಾರರು ಹಾಗೂ ಸಂತ ಶ್ರೇಷ್ಠರು ಹುಟ್ಟಿಕೊಂಡಿರುವ ಕಾಲವಾಗಿದೆ. ಪ್ರಸ್ತುತ 21ನೇ ಶತಮಾನದಲ್ಲಿ ವಚನಗಳಿಗೆ ಮಹತ್ವ ಬಂದಿದೆ. ಶರಣರ ಸಿದ್ಧಾಂತಗಳನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಮಾತ್ರ ಜಯಂತಿಗಳಿಗೆ ಮಹತ್ವ ಬರುತ್ತದೆ ಎಂದರು.
ಇದೇ ಸಂದರ್ಭದಲ್ಲಿ ಸಮಾಜದಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಭೋವಿ ಸಂಘದ ಅಧ್ಯಕ್ಷ ಬಾಲಾಜಿ, ಗೌರವಾಧ್ಯಕ್ಷ ಮಹಾದೇವ, ಪ್ರಧಾನ ಕಾರ್ಯದರ್ಶಿ ವಸಂತ್ ಕುಮಾರ್, ಲಕ್ಷ್ಮಣ ಭೋವಿ, ಹರೀಶ್ ಕುಮಾರ್, ಕಾಳಪ್ಪ, ಶಿವರಾಜು, ಪಾಪಣ್ಣ ಮಣಿಕಂಠ ಸ್ವಾಮಿ ನರಸಿಂಹ ಉಮೇಶ್ ಲಿಂಗರಾಜು ತಿಮ್ಮರಸು ಸೇರಿದಂತೆ ತಾಲೂಕು ಮಟ್ಟದ ಅಧಿಕಾರಿಗಳು ಹಾಗೂ ಸಮಾಜದ ಮುಖಂಡರು ಹಾಜರಿದ್ದರು.

# ಶತಮಾನೋತ್ಸವದ ಹೊಸ್ತಿಲಿನಲ್ಲಿ.... ಮುಂಡರಗಿಯ ಜಗದ್ಗುರು ಅನ್ನದಾನೀಶ್ವರ ವಿದ್ಯಾ ಸಮಿತಿ

ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಮಠಗಳು ಧರ್ಮ ಸಂಸ್ಕೃತಿ ಮತ್ತು ಕಲೆಯ ಪ್ರಸಾರ ಕೇಂದ್ರಗಳು. ನಮ್ಮ ಮಠಗಳಲ್ಲಿ ಧರ್ಮಕ್ಕೆ ಇರುವಷ್ಟೇ ಮಾನ್ಯತೆ ಅನ್ನದಾಸೋಹಕ್ಕೆ ಹಾಗೂ ಜ್ಞಾನದಾಸೋಹಕ್ಕೆ ಇದೆ. ಸರಕಾರಗಳು ಶಾಲೆ ಕಾಲೇಜುಗಳನ್ನು ಆರಂಭಿಸುವುದಕ್ಕೂ ಮುನ್ನವೇ ಊರಲ್ಲಿ ಕೂಲಿ ಮಠಗಳ ಮೂಲಕ ಜ್ಞಾನದಾಸೋಹವನ್ನು ಆರಂಭಿಸಿದವರು ನಮ್ಮ ಮಠಗಳ ಮಹಾಶಿವಯೋಗಿಗಳು. ಇದರ ಜೊತೆಗೆ ಹಸಿದು ಬಂದ ಜನರಿಗೆ ಆ ಹೊತ್ತಿನ ಹಸಿವನ್ನು ನೀಗಿಸಿದ ಕೀರ್ತಿ ಕೂಡ ಮಠಗಳಿಗಿದೆ...ಆದ್ದರಿಂದಲೇ ಮಠಗಳನ್ನು ತ್ರಿವಿಧ ದಾಸೋಹದ ತಾಣಗಳು ಎಂಬ ಅನ್ವರ್ಥಕ ನಾಮದಿಂದ ಕರೆಯಲ್ಪಡುತ್ತವೆ. ಭಕ್ತಿ ಶ್ರದ್ದೆಗಳ ನೆಲೆವೀಡು ನಂಬಿದವರಿಗೆ ಇಂಬು ನೀಡುವ ತಾಣಗಳು ನಮ್ಮ ಮಠಗಳು. ಅಂತಹ ಒಂದು ತ್ರಿವಿಧ ದಾಸೋಹದ ತಾಣವೇ ಮುಂಡರಗಿಯ ಜಗದ್ಗುರು ಅನ್ನದಾನೀಶ್ವರ ಮಠ.

ಮೃಡಗಿರಿ ಎಂದು ಹೆಸರಾದ ಈ ಸ್ಥಳದಲ್ಲಿ ಜಗದ್ಗುರು ಅನ್ನದಾನೀಶ್ವರ ಮಠದ ಅಸ್ತಿತ್ವವಿಲ್ಲದೆ ಹೋಗಿದ್ದರೆ ಅದು ಮೂಢಗಿರಿಯಾಗಿಯೇ ಉಳಿಯುತ್ತಿತ್ತು. ಬರದ ನಾಡೆಂದು ಹೆಸರಾದ ಈ ಭಾಗ ಮೂಲಭೂತ ಸೌಲಭ್ಯಗಳ ಕೊರತೆಯಿಂದ ಬಳಲುತ್ತಿತ್ತು. ಬಸವಣ್ಣನವರ ಸೋದರಳಿಯ ಅವಿರಳಜ್ಞಾನಿ ಎಂದೇ ಹೆಸರಾದ ಚನ್ನಬಸವಣ್ಣನವರು ನೀಡಿದ ವಿಭೂತಿಯ ಕ್ರಿಯಾ ಗಟ್ಟಿಯ ಐತಿಹಾಸಿಕ ಹಿನ್ನೆಲೆಯನ್ನು ಹೊಂದಿರುವ ಈ ಶ್ರೀಮಠದ ಮೂಲಪುರುಷ ಶ್ರೀ ಜಗದ್ಗುರು ಅನ್ನದಾನೀಶ್ವರ ಮಹಾಶಿವಯೋಗಿಗಳು. ಬಡತನ ಮತ್ತು ಕಿತ್ತು ತಿನ್ನುವ ಹಸಿವಿನಿಂದ ತತ್ತರಿಸುತ್ತಿದ್ದ ಈ ಭಾಗದ ಜನರಿಗೆ ಜಗದ್ಗುರು ಅನ್ನದಾನೀಶ್ವರ ಮಹಾಶಿವಯೋಗಿಗಳು ತಮ್ಮ ದಾಸೋಹ ಸೇವೆಯ ಮೂಲಕ ಒಡಲು ತುಂಬಿಸಿದರು. ಬುದ್ಧಿ ಮಾತನ್ನು ಹೇಳಿ ಮನದ ಕೊಳೆಯನ್ನು ಕಳೆದರು. ಮೃಡಗಿರಿಯನ್ನು ಆಧ್ಯಾತ್ಮ, ಜ್ಞಾನ, ದಾಸೋಹದಂತಹ ಸಾಮಾಜಿಕ ಮತ್ತು ಧಾರ್ಮಿಕ ಕ್ಷೇತ್ರಗಳ ತಾಣವನ್ನಾಗಿಸಿದರು. ಶಿವಯೋಗಿಗಳು ಜನರ ಮನೆ ಮನಗಳ ಕೊಳೆಯನ್ನು ಹಿಂಗಿಸಿ ಶ್ರೀಮಠದ ನಿರಂಜನ ಜಂಗಮ ಪೀಠದ ಮೂಲ ಪುರುಷರಾದರು.

ಇದೀಗ ಶ್ರೀಮಠದ ಜಂಗಮಪೀಠದ ಮೇಲೆ ವಿರಾಜಮಾನರಾಗಿರುವುದು ಹತ್ತನೆಯ ಪೀಠಾಧಿಪತಿ ಪರಮ ನಿರಂಜನ ಜಂಗಮಮೂರ್ತಿ ನಾಡೋಜ ಡಾಕ್ಟರ್ ಅನ್ನದಾನೀಶ್ವರ ಮಹಾಸ್ವಾಮಿಗಳು. ಬದುಕಿನ ದೀರ್ಘಕಾಲದ ಪಯಣದಲ್ಲಿ ಮಹತ್ತರವಾದ ಕೃತಿಗಳನ್ನು ಅವರು ರಚಿಸಿದ್ದು ಕಾಲಮಾನವೇ ವಿಸ್ಮಯ ಪಡುವಂತಹ ಸಾಹಿತ್ಯಕ ಸಾಧನೆ ಸಾಂಸ್ಕೃತಿಕ ಸಿದ್ಧಿಗಳನ್ನು ಶ್ರೀಗಳು ಸಾಧಿಸಿದ್ದಾರೆ. ತಾಯಿ ಒಡಲನ್ನು ಹೊಂದಿರುವ, ಪ್ರೀತಿಯ ಹೊನಲನ್ನು ಹರಿಸುವ ಜ್ಞಾನ ಸುಧೆಯ ಅಮೃತವನ್ನು ಗುಣಪಡಿಸುವ ಶ್ರೀಗಳು ಈ ಭಾಗದ ಜನರ ಕಣ್ಣಾಗಿದ್ದಾರೆ ಎಂದರೆ ತಪ್ಪೇನಿಲ್ಲ.

ಶ್ರೀಮಠದ ಒಂಬತ್ತನೇ ಪೀಠಾಧಿಪತಿಗಳಾದ ವೆಂಕಟಪುರ ಅಜ್ಜನವರು ಎಂದೇ ಹೆಸರಾದ ಪೂಜ್ಯರು 1912 ರಲ್ಲಿ ಜಗದ್ಗುರು ಅನ್ನದಾನೀಶ್ವರ ಸಂಸ್ಕೃತ ಪಾಠಶಾಲೆ ಹಾಗೂ ಅನ್ನದಾನೀಶ್ವರ ಉಚಿತ ಪ್ರಸಾದ ನಿಲಯಗಳನ್ನು ಆರಂಭಿಸುವ ಮೂಲಕ ಅನ್ನದಾನೀಶ್ವರ ವಿದ್ಯಾ ಸಮಿತಿ ಅಸ್ತಿತ್ವಕ್ಕೆ ಬಂತು. ಮುಂದೆ 1924ರಲ್ಲಿ ಕೇವಲ 12 ಜನ ವಿದ್ಯಾರ್ಥಿಗಳೊಂದಿಗೆ ನ್ಯೂ ಇಂಗ್ಲಿಷ್ ಶಾಲೆ ಆರಂಭವಾಯಿತು. ಅಂದಿನ ಮುಂಡರಗಿಯ ಶ್ರೀ ಮಠದ ಭಕ್ತರಾದ ಅಭಿವೃದ್ಧಿಯ ಹರಿಕಾರರಾದ ಕೊಪ್ಪಳ ವೀರಭದ್ರಪ್ಪನವರು ಅವಿರತ ಪ್ರಯತ್ನ ಹಾಗೂ ಇಲ್ಲೂರು ವಾಸಪ್ಪನವರ ಭೂದಾನದಿಂದಾಗಿ ಹಾಗೂ ಶ್ರೀಮಠದ ಸದ್ಭಕ್ತರ ಒತ್ತಾಸೆಯಿಂದ ಆರಂಭವಾದ ವಿದ್ಯಾ ಸಮಿತಿಯು ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳನ್ನು ಆರಂಭಿಸಲಾಯಿತು.

1948 ರಲ್ಲಿ ಪ್ರಾರಂಭವಾದ ಪ್ರೌಢಶಾಲೆಯ ಕಟ್ಟಡ ನಿರ್ಮಾಣಕ್ಕೆ ಅಂದಿನ ಮುಖ್ಯಮಂತ್ರಿಗಳಾದಎಸ್. ನಿಜಲಿಂಗಪ್ಪನವರು ಅಡಿಗಲ್ಲು ಹಾಕಿದರು. 1958 ರಲ್ಲಿ ನಿರ್ಮಾಣಗೊಂಡ ಕಟ್ಟಡವನ್ನು ಅಂದಿನ ರಾಜ್ಯಪಾಲರಾದ ಜಯ ಚಾಮರಾಜೇಂದ್ರ ಒಡೆಯರ್ ಅವರು ಉದ್ಘಾಟಿಸಿದರು.

ಮುಂದೆ 1969ರಲ್ಲಿ ದಶಮಪೀಠಾಧಿಪತಿಗಳಾಗಿ ಸ್ಥಾನವನ್ನು ಅಲಂಕರಿಸಿದ ಇಂದಿನ ಜಗದ್ಗುರು ಡಾ. ಅನ್ನದಾನೀಶ್ವರ ಮಹಾಶಿವಯೋಗಿಗಳು ಧರ್ಮ, ದಾಸೋಹ ಸೇವೆಯ ಜೊತೆಗೆ ಶಿಕ್ಷಣ ಸಂಸ್ಥೆಗಳನ್ನು ಅಭಿವೃದ್ಧಿ ಪಡಿಸಿ ಮುಂಡರಗಿಯ ಇತಿಹಾಸವನ್ನೇ ಬದಲಿಸಿದರು ಎಂದರೆ ತಪ್ಪಿಲ್ಲ.ವಿಶ್ವ ಜ್ಯೋತಿ, ಜಗದ್ಗುರು ಅಣ್ಣ ಬಸವಣ್ಣನವರ ಕಾಯಕವೇ ಕೈಲಾಸ ಎಂಬ ಪ್ರಣವ ಮಂತ್ರವನ್ನು ತಮ್ಮ ಬದುಕಿನ ಮಹಾಮಂತ್ರವನ್ನಾಗಿಸಿಕೊಂಡ ಶ್ರೀಗಳು ಶ್ರೀಮಠ ಮತ್ತು ಶಾಖಾಮಠಗಳ ಜೀರ್ಣೋದ್ಧಾರ, ನೂರಕ್ಕೂ ಹೆಚ್ಚಿನ ಶಿಕ್ಷಣ ಸಂಸ್ಥೆಗಳ ನಿರ್ಮಾಣ, ನೂರಾರು ಎಕರೆಗಳಷ್ಟು ಭೂಮಿ ಧಾನ, ಲಕ್ಷಾಂತರ ರೂಗಳ ಹಣಕಾಸಿನ ದಾನವನ್ನು ನೀಡಿದ್ದಾರೆ. ವಿಜಯಪುರದ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ದತ್ತಿ ಉಪನ್ಯಾಸಕ್ಕೆ, ಶರಣ ಸಾಹಿತ್ಯದ ಅಧ್ಯಯನ ಪೀಠಕ್ಕೆ ಕೂಡ ಶ್ರೀಗಳು ಲಕ್ಷಾಂತರ ರೂ ಹಣವನ್ನು ಕೊಡುಗೆಯಾಗಿ ನೀಡಿದ್ದಾರೆ. ಐದು ವಿಶ್ವವಿದ್ಯಾಲಯಗಳ ಚಿನ್ನದ ಪದಕಗಳಿಗೆ ಇಡಿ ಗಂಟನ್ನು ನೀಡಿದ್ದಾರೆ. ತಾಲೂಕ ಕನ್ನಡ ಸಾಹಿತ್ಯ ಪರಿಷತ್ತಿನ ಕಟ್ಟಡ ನಿರ್ಮಾಣ, ವಿಜ್ಞಾನ ಭವನದ ನಿರ್ಮಾಣ, ಸ್ಟೇಡಿಯಂ ನಿರ್ಮಾಣ, ಆಸ್ಪತ್ರೆಯ ಕಟ್ಟಡ ಹೀಗೆ ಹತ್ತು ಹಲವು ಸಾರ್ವಜನಿಕ ಸೇವೆಯ ಕಾರ್ಯಗಳಿಗೆ ಭೂದಾನದ ಜೊತೆ ಜೊತೆಗೆ ಧನಸಹಾಯವನ್ನು ಕೂಡ ಶ್ರೀಮಠದಿಂದ ಕೊಡುಗೆಯಾಗಿ ನೀಡಿರುವ ಶ್ರೀಗಳು 'ಘಟದಿಂದ ಮಠ ಬೆಳೆಯಬೇಕು' ಎಂಬುದಕ್ಕೆ ನಿದರ್ಶನವಾಗಿದ್ದಾರೆ.

ಇಳಿವಯಸ್ಸಿನಲ್ಲಿ ಇಂದಿಗೂ ಕೂಡ ತ್ರಿಕಾಲ ಪೂಜೆ, ಅಧ್ಯಯನ, ಚರ್ಚೆ, ವಿವಿಧ ಕಾರ್ಯಕ್ರಮಗಳ ಆಯೋಜನೆ, ಶಿಕ್ಷಣ ಸಂಸ್ಥೆಗಳ ಆಡಳಿತಕ್ಕೆ ಅನುಭವ ಮತ್ತು ಅನುಭಾವಗಳಿಂದ ಕೂಡಿದ ಮಾರ್ಗದರ್ಶನ ನೀಡುತ್ತಿರುವ ಶ್ರೀಗಳ ಉತ್ಸಾಹ ಅಪರಿಮಿತ, ಕ್ರಿಯಾಶೀಲತೆ ಅಸದಳ.

ಸ್ವತಃ ಸಾಹಿತಿಯಾಗಿರುವ ಶ್ರೀಗಳು ನಾಡಿನ ಸಾಹಿತ್ಯ ಕ್ಷೇತ್ರಕ್ಕೆ ಸುಮಾರು 250ಕ್ಕೂ ಹೆಚ್ಚು ಕೃತಿಗಳನ್ನು ಸಲ್ಲಿಸಿದ್ದು ವಿವಿಧ ವಿಶ್ವವಿದ್ಯಾಲಯಗಳು ನೀಡುವ ಗೌರವ ಡಾಕ್ಟರೇಟ್ ಮತ್ತು ನಾಡೋಜ ಪದವಿಗಳು ಅವರಿಗೆ ಸಂದಿವೆ. ಅವರ ಜೀವನ ಸಾಧನೆಯಾಗಿ ಅವರ 75ನೇ ವರ್ಷದ ಮಹೋತ್ಸವದಲ್ಲಿ ಅವರ ಸಮಗ್ರ ಸಾಹಿತ್ಯದ 19 ಸಂಪುಟಗಳನ್ನು ಪ್ರಕಟಿಸಲಾಯಿತು.

ಶರಣರ ಗುರು ಕರಣ ತ್ರಿವಿಧಿಗೆ ಬರೆದ ವ್ಯಾಖ್ಯಾನ.... ಕನ್ನಡ ತತ್ವ ಸಾಹಿತ್ಯಕ್ಕೆ ಶ್ರೀಗಳು ನೀಡಿದ ಅಮೂಲ್ಯ ಕೊಡುಗೆಯಾಗಿದೆ. ಅನುಭವಸಂಪದ ಎಂಬ ಕೃತಿಯಲ್ಲಿ ಪೂಜ್ಯರು ಐದು ಕೃತಿಗಳನ್ನು ವ್ಯಾಖ್ಯಾನಿಸಿದ್ದಾರೆ.

ಮೂರನೆಯ ಸಂಪುಟದಲ್ಲಿ ಸ್ವಯಂ ಶ್ರೀಗಳು ರಚಿಸಿದ ಸುಮಾರು 1408 ವಚನಗಳನ್ನು ಪ್ರಕಟಿಸಲಾಗಿದೆ. ವಚನವಾಙ್ಮಯವನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿ ವಚನಗಳ ಭಾವ ವಿವರಣೆ, ಸಾರಾಂಶ ನಿರೂಪಣೆ, ವಚನಗಳ ವಿಶ್ಲೇಷಣೆ ಮತ್ತು ಚಿಂತನೆಯನ್ನು ಶ್ರೀಗಳು ಮಾಡಿದ್ದಾರೆ.

ಉಚಿತ ಪ್ರಸಾದ ನಿಲಯಗಳು, ಉತ್ತಮ ಶಿಕ್ಷಣ ನೀಡುತ್ತಿರುವ 32ಕ್ಕೂ ಹೆಚ್ಚು ಶಾಲಾ ಕಾಲೇಜುಗಳು, ವಿವಿಧ ವರ್ಗಗಳ ಮಕ್ಕಳಿಗಾಗಿ ಊಟ ಸಹಿತ ವಸತಿ ನಿಲಯಗಳು ಶ್ರೀಗಳ ಸಾಧನೆಯ ಪ್ರಭಾವಲಯದ ಅಡಿಯಲ್ಲಿವೆ. ಮುಂಡರಗಿಯ ವಿವಿಧ ಸಂಘ ಸಂಸ್ಥೆಗಳ ಯಾವುದೇ ರೀತಿಯ ಕಾರ್ಯಗಳಿಗೆ ಶ್ರೀಮಠದ ಸಹಾಯ,ಪ್ರೋತ್ಸಾಹ ಹಸ್ತ ಇದ್ದೇ ಇರುತ್ತದೆ.

ಸ್ವಾತಂತ್ರ್ಯ ಪೂರ್ವದಿಂದ ಇಲ್ಲಿಯವರೆಗೂ ಶ್ರೀಮಠವು ಅನ್ನ, ಅಕ್ಷರ, ಅರಿವು ಮತ್ತು ಆಸರೆ ನೀಡುವಲ್ಲಿ ನಿರತವಾಗಿದೆ.

ಇದೀಗ ಜಗದ್ಗುರು ಅನ್ನದಾನೀಶ್ವರ ಶಿಕ್ಷಣ ಸಂಸ್ಥೆಯ ಶತಮಾನೋತ್ಸವ ಕಾರ್ಯಕ್ರಮದ ಪ್ರಯುಕ್ತ ಕಳೆದ ವರ್ಷದಿಂದ ಅರ್ಥಪೂರ್ಣವಾದ ನೂರು ಕಾರ್ಯಕ್ರಮಗಳು ಆಯೋಜನೆಗೊಂಡು ಇದೀಗ ಅಂತಿಮ ಘಟ್ಟವಾಗಿ

ಶತಮಾನೋತ್ಸವ ಕಾರ್ಯಕ್ರಮದ ನಿಮಿತ್ತ ಶ್ರೀ ಜಗದ್ಗುರು ಅನ್ನದಾನೀಶ್ವರ ಸಂಯುಕ್ತ ಪದವಿ ಪೂರ್ವ

ಕಾಲೇಜಿನ ನೂತನ ಕಟ್ಟಡ ಉದ್ಘಾಟನೆಗೊಳ್ಳುತ್ತಿದ್ದು, ವಿಜ್ಞಾನ ವಸ್ತು ಪ್ರದರ್ಶನ ನಡೆಯಲಿದೆ. ಶತಮಾನೋತ್ಸವದ ನಿಮಿತ್ತ ಸಂಸ್ಮರಣ ಗ್ರಂಥವು ಬಿಡುಗಡೆಯಾಗಲಿದ್ದು ಸಾಧಕರಿಗೆ ಹಾಗೂ ದಾನಿಗಳಿಗೆ ಸನ್ಮಾನ ಸಮಾರಂಭ ನಡೆಯಲಿದೆ.

ದಶಮ ಪೀಠಾಧಿಪತಿಗಳಾದ ಶ್ರೀ ಮ.ನಿ.ಪ್ರ ನಾಡೋಜ ಜಗದ್ಗುರು ಡಾ. ಅನ್ನದಾನೀಶ್ವರ ಮಹಾಶಿವಯೋಗಿಗಳ ದಿವ್ಯ ಸಾನಿಧ್ಯದಲ್ಲಿ, ಶ್ರೀಮಠದ ಉತ್ತರಾಧಿಕಾರಿಗಳಾದ ಶ್ರೀ ಮ ನಿ ಪ್ರ ಡಾ. ಮಲ್ಲಿಕಾರ್ಜುನ ಮಹಾಸ್ವಾಮಿಗಳು ಅವರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ಮುನ್ನಡೆಯುತ್ತಿದ್ದು ಕರ್ನಾಟಕ ಘನ ಸರ್ಕಾರದ ವಿವಿಧ ಸ್ಥಾನಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮಂತ್ರಿ ಮಹೋದಯರು ಆಗಮಿಸುತ್ತಿದ್ದಾರೆ. ಸಂಸ್ಮರಣ ಸಂಚಿಕೆ (ಮೃಡಗಿರಿಯ ಹೊಸ ಬೆಳಕು', ಸ್ಮರಣ ಸಂಚಿಕೆ ವಿದ್ಯಾಕಿರಣ ಹಾಗೂ ಜೇಂಗೊಡ ಎಂಬ ಗ್ರಂಥಗಳು ಲೋಕಾರ್ಪಣೆಗೊಳ್ಳಲಿವೆ.

ಕಾರ್ಯಕ್ರಮದಲ್ಲಿ ವಿದ್ಯಾ ಸಮಿತಿಯಲ್ಲಿ ಓದಿದ ಹಳೆಯ ವಿದ್ಯಾರ್ಥಿಗಳು ಸಂಸ್ಥೆಯ ಬೆಳವಣಿಗೆಯಲ್ಲಿ ಪಾತ್ರವಹಿಸಿದ ಗದಗ ಜಿಲ್ಲೆಯ ಮುಂಡರಗಿ ತಾಲೂಕಿನ ಎಲ್ಲ ಜನರು ಭಾಗವಹಿಸಬೇಕೆಂದು ವಿದ್ಯಾ ಸಮಿತಿಯ ಪದಾಧಿಕಾರಿಗಳು ಪ್ರೀತಿಯಿಂದ ಆಗ್ರಹಿಸಿದ್ದಾರೆ. ಮುಂಡರಗಿಯಲ್ಲಿ ಎರಡು ದಿನಗಳ ಕಾಲ ನಡೆಯಲಿರುವ ಜಗದ್ಗುರು ಅನ್ನದಾನೀಶ್ವರ ವಿದ್ಯಾ ಸಮಿತಿಯು ಶತಮಾನೋತ್ಸವದ ಈ ಕಾರ್ಯಕ್ರಮ ಅಭೂತಪೂರ್ವ ಯಶಸ್ಸನ್ನು ಕಾಣಲಿ ಎಂಬ ಆಶಯದೊಂದಿಗೆ

**ವೀಣಾ ಹೇಮಂತ್ ಗೌಡ ಪಾಟೀಲ್ ಮುಂಡರಗಿ, ಗದಗ**

# ಸಿದ್ದರಾಮಯ್ಯ ಯಾವತ್ತಿಗೂ ದೇವರಾಜ ಅರಸು ಆಗಲು ಸಾಧ್ಯವಿಲ್ಲ: ಪ್ರತಾಪ ಸಿಂಹ

**ಮೈಸೂರು: ಜ.16:–** ಶಿಡ್ಲಘಟ್ಟ ಪೌರಾಯುಕ್ತೆಗೆ ಕಾಂಗ್ರೆಸ್ ಮುಖಂಡ ಧಮ್ಕಿ ಹಾಕಿರುವ ಕುರಿತು ಕಟುವಾಗಿ ಪ್ರತಿಕ್ರಿಯಿಸಿರುವ ಮಾಜಿ ಸಂಸದ ಪ್ರತಾಪ ಸಿಂಹ, ಮುಖ್ಯಮಂತ್ರಿ ಸಿದ್ದರಾಮಯ್ಯ ಬಳಸುವ ಭಾಷೆ ಸರಿ ಇದ್ದರೆ ಅವರ ಕಾರ್ಯಕರ್ತರದು ಸರಿ ಇರುತ್ತಿತ್ತು. ಅವರ ಬಾಯಿಯೇ ಬಚ್ಚಲಾಗಿದೆ ಎಂದಿದ್ದಾರೆ.

ನಗರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಧಿಕಾರಿಗೆ ಧಮ್ಕಿ ಹಾಕಿದ ಪುಡಾರಿಯನ್ನು ಒದ್ದು ಒಳಗೆ ಹಾಕಿ. ಸಿಎಂ ಸಿದ್ದರಾಮಯ್ಯ ರ ಬಾಯೆ ಬಚ್ಚಲಾಗಿದೆ. ಅವರೇ ಯಾರಿಗೂ ಮರ್ಯಾದೆ ಕೊಡಲ್ಲ. ಇದನ್ನೆ ಅವರ ಪಕ್ಷದವರೂ ಅನುಸರಿಸುತ್ತಿದ್ದಾರೆ. ಸಿಎಂ ಬಳಸುವ ಭಾಷೆ ಸರಿ ಇದ್ದರೆ ಅವರ ಕಾರ್ಯಕರ್ತರದು ಸರಿ ಇರುತ್ತಿತ್ತು ಎಂದು ಹೇಳಿದ್ದಾರೆ.

ಹಿಂದೆ ಐಎಎಸ್ ಅಧಿಕಾರಿಗೆ ಸಿದ್ದರಾಮಯ್ಯ ಭಂಟ ನಿಂದಿಸಿದ್ದ. ಇಂತಹ ಹಲವು ಘಟನೆ ನಡೆದಿವೆ. ಈಗ ಮತ್ತೆ ಮುಂದುವರಿದಿದೆ. ರಾಜ್ಯವನ್ನು ಮೊದಲು ಫ್ಲೇಕ್ಸ್ ಮುಕ್ತ ಮಾಡಿ. ನನ್ನ ಫೋಟೋ ಇದ್ದರು ಕೂಡ ಫ್ಲೇಕ್ಸ್ ತೆಗೆಸಿ ಎಂದರು.

ರಾಜ್ಯದಲ್ಲಿ ಆಡಳಿತ ಸತ್ತಿದೆ. ಸತ್ತ ಆಡಳಿದ ಹೆಣವನ್ನು ಸಿದ್ದರಾಮಯ್ಯ ಮುಂದೆ ಹೊತ್ತಿದ್ದಾರೆ. ಡಿ.ಕೆ. ಶಿವಕುಮಾರ್ ಹಿಂದೆ ಹೊತ್ತಿದ್ದಾರೆ. ಆಡಳಿತದ ಹೆಣವನ್ನು ಮುಂದೆ ಹೊರಲು ಡಿ.ಕೆ. ಶಿವಕುಮಾರ್ ಯತ್ನಿಸುತ್ತಿದ್ದಾರೆ. ಹೆಣ ಮುಂದೆ ಯಾರಾದರೂ ಹೊರಲಿ, ಹಿಂದೆ ಯಾರಾದರೂ ಹೊರಲಿ. ಅದರಲ್ಲೇನೂ ವ್ಯತ್ಯಾಸ ಇಲ್ಲ ಎಂದರು.



ಸಿದ್ದರಾಮಯ್ಯ ಯಾವತ್ತಿಗೂ ದೇವರಾಜ ಅರಸು ಆಗಲು ಸಾಧ್ಯವಿಲ್ಲ. ಸಿದ್ದರಾಮಯ್ಯ ಬಹಳ ಬೇಗ ಜನರ ಮನಸ್ಸಿನಿಂದ ದೂರ ಆಗುತ್ತಾರೆ. ಜನ ಸಿದ್ದರಾಮಯ್ಯ ಅವರನ್ನು ಮರೆಯುವ ದಿನಗಳ ಬಹಳ ದೂರವಿಲ್ಲ. ಡಿ.ಕೆ. ಶಿವಕುಮಾರ್ ಅವರೊಂದಿಗೆ ಪೈಪೋಟಿ ಮಾಡುತ್ತಾ ಇನ್ನಷ್ಟು ದಿನ ಸಿದ್ದರಾಮಯ್ಯ ತಮ್ಮ ಸ್ಥಾನ ಉಳಿಸಿಕೊಳ್ಳಬಹುದು. ಆದರೆ ಪ್ರಯೋಜನವೇನು ಎಂದು ಪ್ರಶ್ನಿಸಿದರು.

ಜನ ಕಳೆದ ಚುನಾವಣೆಯಲ್ಲಿ ಮಾಡಿದ ತಪ್ಪಿನಿಂದ ಕಾಂಗ್ರೆಸ್ ಅಧಿಕಾರಕ್ಕೆ ಬಂದಿದೆ. ಇನ್ನೂ ಎರಡೂವರೆ ವರ್ಷ ಈ ಸತ್ತ ಆಡಳಿತ ಸಹಿಸಿಕೊಳ್ಳಲೇ ಬೇಕು. ಈ ಸರ್ಕಾರ ಬೀಳುವುದಿಲ್ಲ. ಕುರ್ಚಿಯಲ್ಲಿ ಕೂರುವವರು ಬದಲಾಗಬಹುದು ಅಷ್ಟೆ ಎಂದರು.

ಚಾಮರಾಜ ಕ್ಷೇತ್ರದ ಜನಕ್ಕೆ ಉಪಕಾರ ಮಾಡದಿದ್ದರು ಉಪದ್ರ ನೀಡುವ ಜನಪ್ರತಿನಿಧಿಗಳು ಬೇಕಿಲ್ಲ. ವಿದ್ಯಾವಂತರೆ ಇರುವ ಚಾಮರಾಜ ಕ್ಷೇತ್ರದ ಜನರಿಗೆ ವಿದ್ಯಾವಂತರೆ ಪ್ರತಿನಿಧಿ ಆಗಲು ಬಯಸುತ್ತಾರೆ. ಬಿಜೆಪಿಯ ಶಂಕರಲಿಂಗೇಗೌಡ ಜನಸ್ನೇಹಿ ಶಾಸಕ. ಕಾಂಗ್ರೆಸ್ ನ ವಾಸು ಅಭಿವೃದ್ಧಿ ಸ್ನೇಹಿ ಶಾಸಕ. ಇವರಿಬ್ಬರು ನನಗೆ ಸದಾ ಸ್ಮರಣೀಯರು. ನಾನು ಚಾಮರಾಜ ಕ್ಷೇತ್ರದ ಆಕಾಂಕ್ಷಿ. ಅಭ್ಯರ್ಥಿ ಯಾರಾಗಬೇಕು ಎಂಬುದನ್ನು ಪಕ್ಷದ ಹೈಕಮಾಂಡ್ ನಿರ್ಧರಿಸುತ್ತದೆ. ಆಕಾಂಕ್ಷಿಗೂ, ಅಭ್ಯರ್ಥಿಗೂ ವ್ಯತ್ಯಾಸ ಗೊತ್ತಿಲ್ಲದೆ ಕೆಲವರು ಏನೇನೋ ಮಾತಾಡುತ್ತಿದ್ದಾರೆ ಎಂದು ಸ್ವಪಕ್ಷೀಯ ನಗರಾಧ್ಯಕ್ಷ ಎಲ್. ನಾಗೇಂದ್ರಗೆ ಟಾಂಗ್ ನೀಡಿದರು.

# ಶರಣರು ಹಾಕಿಕೊಟ್ಟ ದಾರಿಯಲ್ಲಿ ನಡೆಯಿರಿ

**ಕೊಟ್ಟೂರು, ಜ.16:** ಶರಣರು ಹಾಕಿಕೊಟ್ಟ ದಾರಿಯಲ್ಲಿ ನಾವೆಲ್ಲರೂ ನಡೆಯಬೇಕಿದೆ ಎಂದು ತಹಶೀಲ್ದಾರ್ ಅಮರೇಶ ಜಾಲಹಳ್ಳಿ ತಿಳಿಸಿದರು.

ಪಟ್ಟಣದ ತಾಲೂಕು ಕಛೇರಿಯ ಮಹಾತ್ಮ ಗಾಂಧೀಜಿ ಸಭಾಂಗಣದಲ್ಲಿ ಶ್ರೀ ಸಿದ್ಧರಾಮೇಶ್ವರ ಜಯಂತಿ ಪ್ರಯುಕ್ತ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಮಾತನಾಡಿದರು. ಸಿದ್ಧರಾಮೇಶ್ವರರು ಮಹಾನ್ ವಚನಕಾರ, ತತ್ವಜ್ಞಾನಿ, ಸಾಮಾಜಿಕ ಸುಧಾರಕ, ಕರ್ಮಯೋಗಿ, ಕೆರೆ, ಕಟ್ಟೆ, ದೇವಸ್ಥಾನಗಳನ್ನು ನಿರ್ಮಿಸುವುದರ ಮೂಲಕ ಸಮಾಜ ಮುಖಿಯಾಗಿ ಕಾರ್ಯನಿರ್ವಹಿಸಿದ್ದರು. ಅನುಭವ ಮಂಟಪದ 3ನೇ ಅಧ್ಯಕ್ಷರಾಗಿದ್ದ, ಸಾವಿರಾರು ವಚನಗಳನ್ನು ರಚಿಸುವ ಮೂಲಕ ಸಾಮಾಜಿಕ ಸಮಾನತೆ, ಮೂಢನಂಬಿಕೆ, ಅನಿಷ್ಟಗಳನ್ನು ತೊಲಗಿಸಲು ಪ್ರಯತ್ನಿಸಿ ಕರ್ತವ್ಯವೇ ದೇವರೆಂದು ನಂಬಿದ್ದ ಸಮತೆಯ ಗಾರುಡಿಗರು ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಮುಖಂಡ ದೊಡ್ಡರಾಮಣ್ಣ, ಅಧ್ಯಕ್ಷ ಹಲುಗಪ್ಪ, ಮುಖಂಡರಾದ ವಿ ಟಿ ಎಸ್ ತಿಪ್ಪೇಸ್ವಾಮಿ ವೆಂಕಟೇಶ್, ಪಿ ಹೆಚ್ ಪಂಪಣ್ಣ, ಸಣ್ಣ ರಾಮಪ್ಪ, ಪಿ. ಎಚ್. ಕೊಟ್ರೇಶ, ಪಿಡಬ್ಲುಡಿ ಇಂಜಿನಿಯರ್ ಕೊಟ್ರೇಶ್ ಹಾಗೂ ಇತರೆ ಭೋವಿ ಸಮಾಜದ ಮುಖಂಡರು ಭಾಗವಹಿಸಿದ್ದರು.

ಗಣೇಶನ ದೇವಸ್ಥಾನದಿಂದ ಪಟ್ಟಣದಲ್ಲಿ ಅದ್ದೂರಿಯಾಗಿ ಶ್ರೀ ಸಿದ್ದರಾಮೇಶ್ವರ ಭಾವಚಿತ್ರದ ಮೆರವಣಿಗೆ ನೆರವೇರಿತು.

# ಮುಂಬೈ ಪಾಲಿಕೆ: ಬಿಜೆಪಿ ಮುನ್ನಡೆ ಮಹಾರಾಷ್ಟ್ರ ಸ್ಥಳೀಯ ಚುನಾವಣೆ: ಮಹಾಯುತಿ ಮುನ್ನಡೆ ಶಿವಸೇನೆ ಕಾಂಗ್ರೆಸ್ ಎನ್‌ಸಿಪಿಗೆ ಹಿನ್ನಡೆ

**ಮುಂಬೈ, ಜ. 16–** ದೇಶದ ಆರ್ಥಿಕ ರಾಜಧಾನಿ ಮುಂಬೈ ಸೇರಿದಂತೆ ಮಹಾರಾಷ್ಟ್ರದ 29 ಮಹಾನಗರ ಪಾಲಿಕೆಗಳಿಗೆ ನಡೆದ ಚುನಾವಣೆಯ ಮತ ಎಣಿಕೆ ಇಂದು ನಡೆದಿದ್ದು, ಬಿಜೆಪಿ ನೇತೃತ್ವದ ಮಹಾಯುತಿ ಆರಂಭಿಕ ಮುನ್ನಡೆ ಸಾಧಿಸಿದೆ.

ಮಹಾರಾಷ್ಟ್ರದ 29 ಸ್ಥಳೀಯ ಸಂಸ್ಥೆಗಳಿಗೆ ನಡೆದ ಚುನಾವಣೆಯಲ್ಲಿ ಆಡಳಿತಾರೂಡ ಮಹಾಯುತಿ ಮೈತ್ರಿಕೂಟ 23 ಸ್ಥಳೀಯ ಸಂಸ್ಥೆಗಳಲ್ಲಿ ಅಧಿಕಾರ ಹಿಡಿಯುವತ್ತ ಮುನ್ನಡೆ ಸಾಧಿಸಿದೆ.

ಮುಂಬೈ, ಪುಣೆ, ನಾಗಪುರ್ ಸೇರಿದಂತೆ ಮಹಾರಾಷ್ಟ್ರದ ಪ್ರಮುಖ ನಗರಪಾಲಿಕೆಗಳಲ್ಲಿ ಬಿಜೆಪಿ ನೇತೃತ್ವದ ಮೈತ್ರಿಕೂಟ ಮುನ್ನಡೆಯಲ್ಲಿದ್ದು, ಶಿವಸೇನೆ, ಕಾಂಗ್ರೆಸ್, ಎನ್‌ಸಿಪಿ ಪಕ್ಷಗಳಿಗೆ ಹಿನ್ನಡೆಯಾಗಿದೆ.

ದೇಶದ ಆರ್ಥಿಕ ರಾಜಧಾನಿ ಹಾಗೂ ಶ್ರೀಮಂತ ಮಹಾನಗರ ಪಾಲಿಕೆಯಾಗಿರುವ ಮುಂಬೈನಲ್ಲಿ ಪಾಲಿಕೆ ಆಡಳಿತಕ್ಕಾಗಿ ಬಿಜೆಪಿ ನೇತೃತ್ವದ ಮಹಾಯುತಿ ಹಾಗೂ ಶಿವಸೇನೆ ನಡುವೆ ಹಣಾಹಣಿಯೇ ನಡೆದಿದ್ದು, ಆರಂಭಿಕವಾಗಿ ಬಿಜೆಪಿ ಮುನ್ನಡೆಯಲ್ಲಿದೆ.ಮುಂಬೈ ಮಹಾನಗರ ಪಾಲಿಕೆ ಶಿವಸೇನೆಯ ಭದ್ರ ಕೋಟೆಯಾಗಿದ್ದು, ಇದೇ ಮೊದಲ ಬಾರಿಗೆ ಬಿಜೆಪಿ ನೇತೃತ್ವದ ಮಹಾಯುತಿ ಈ ಭದ್ರಕೋಟೆಯನ್ನು ಬೇಧಿಸಿ ಮುನ್ನಡೆಯನ್ನು ಕಾಯ್ದುಕೊಂಡಿದೆ.

ಈ ಚುನಾವಣೆಯಲ್ಲಿ ಬಿಜೆಪಿಯನ್ನು ಮಣಿಸಲು ಹಲವು ವರ್ಷಗಳಿಂದ ದೂರವಾಗಿದ್ದ ಉದ್ಧವ್ ಠಾಕ್ರೆ ಹಾಗೂ ರಾಜ್‌ಠಾಕ್ರೆ ಒಂದಾಗಿದ್ದರೂ ಬಿಜೆಪಿ ಮುನ್ನಡೆ ಕಾಯ್ದುಕೊಂಡಿದೆ.

ಮಹಾರಾಷ್ಟ್ರದಲ್ಲಿ ಶಿವಸೇನೆಯನ್ನು ವಿಭಜಿಸಿ ಏಕನಾಥ್‌ಶಿಂಧೆ ಜತೆಗೂಡಿ ಹಾಗೆಯೇ ಎನ್‌ಸಿಪಿಯನ್ನು ವಿಭಜಿಸಿ ಅಜಿತ್ ಪವಾರ್ ಜತೆಗೂಡಿ ಮಹಾಯುತಿ ಮೈತ್ರಿಕೂಟ ರಚಿಸಿಕೊಂಡಿರುವ ಬಿಜೆಪಿ ಮುಂಬೈ ಸೇರಿದಂತೆ ಮಹಾರಾಷ್ಟ್ರದ ಪ್ರಮುಖ ಪಟ್ಟಣಗಳ ಪಾಲಿಕೆಗಳ ಚುನಾವಣೆಯಲ್ಲಿ ಮುನ್ನಡೆ ಕಾಯ್ದುಕೊಂಡಿದೆ.

ಆಡಳಿತ ಪಕ್ಷದ ಭಾಗವಾಗಿದ್ದ ಎನ್‌ಸಿಪಿ, ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಎನ್ ಸಿಪಿ ಶರದ್ ಪವಾರ್ ಬಣದ ಜೊತೆಗೆ ಕೈಜೋಡಿಸಿ ಚುನಾವಣೆ ಎದುರಿಸಿತ್ತು. ಎನ್ ಸಿಪಿ ಹಾಗು ಎನ್ ಸಿಪಿ ಶರದ್ ಪವಾರ್ ಬಣ. ಹಚ್ಚಿನ ಸ್ಥಾನ ಪಡೆಯುವಲ್ಲಿ ವಿಫಲವಾಗಿವೆ.ಈ ಬಾರಿ ವಿರೋಧ ಪಕ್ಷಗಳ ಮೈತ್ರಿಕೂಟದಲ್ಲಿ ಶಿವಸೇನೆ ಉದ್ದವ್ ಠಾಕ್ರ ಬಣ ಮತ್ತು ಸೋದಹ ಸಂಬಂಧಿ ರಾಜ್ ಠಾಕ್ರೆ ಅವರ ಮಹಾರಾಷ್ಟ್ರ ನವ ನಿರ್ಮಾಣ ಸೇನೆ ಜೊತೆಯಾಗಿ ಸ್ಪರ್ಧೆ ಮಾಡಿದ್ದವು, ಉದ್ದವ್ ಠಾಕ್ರೆ ಬಣ– ಹಾಗು ಎಂಎನ್ ಎಸ್ ಪೈಪೋಟಿ ನೀಡಿದೆ.ಕಾಂಗ್ರೆಸ್ ಹಾಗು ವಿಬಿಎ ಹೆಚ್ಚಿನ ಸ್ಥಾನ ಹಾಗು ಇತರರು ಹಲವು ಕ್ಷೇತ್ರಗಳಲ್ಲಿ ಗೆಲವು ಸಾಧಿಸಿ ಅಧಿಕಾರ ಚುಕ್ಕಾಣಿ ಹಿಡಯುವುಲ್ಲಿ ನಿರ್ಣಾಯಕ ಪಾತ್ರವಹಿಸಿದ್ದಾರೆ. ಬಿಎಂಸಿಯಲ್ಲಿ ಮುನ್ನಡೆ–ಮುಂಬೈನ 227 ಸ್ಥಳೀತ ಸಂಸ್ಥಗಳಿಗೆ ನಡೆದ ಚುನಾವಣೆಯಲ್ಲಿ ಬಿಜೆಪಿ , ಶಿವಸೇನೆ ಮೈತ್ರಿಕೂಟ ಮುನ್ನಡೆ ಪಡೆದಿದೆ. ಬಹುಮತ ಪಡೆಯಲು 114 ಸಂಖ್ಯೆ ಅಗತ್ಯವಿದ್ದು, 86ಕ್ಕೂ ಅಧಿಕ ಸ್ಥಾನ ಪಡೆದು ವಿಜಯದತ್ತ ಹೆಜ್ಜೆ ಹಾಕಿದ್ದಾರೆ.ಶಿವಸೇನೆ ಉದ್ದವ್ ಠಾಕ್ರೆ ಬಣ ಎನ್ ಸಿಪಿ ಎನ್ ಸಿಪಿ ಶರದ್ ಪವಾರ್ ಬಣ. ಕಾಂಗ್ರೆಸ್, ಎಂಎನ್‌ಎಸ್, ವಿಬಿಎ ಹಾಗೂ ಇತರರು ಕ್ಷೇತ್ರಗಳಲ್ಲಿ ಕಮಾಲು ಮಾಡಲು ವಿಫಲವಾಗಿದೆ.



ಇತ್ತೀಚೆಗೆ ನಡೆದ ವಿಧಾನ ಸಭೆ ಚುನಾವಣೆಯಲ್ಲಿ ಬಿಜೆಪಿ, ಶಿವಸೇನೆ ಮತ್ತು ಎನ್ ಸಿಪಿ ಪಕ್ಷಗಳು ಬಾರಿ ಮಹುಮತದಿಂದ ಅಧಿಕಾರ ಹಿಡಿದಿದ್ದವು. ಈ ಭಾರಿ ಮಹಾಯುತಿ ಮೈತ್ರಿಕೂಟದಲ್ಲಿ ಬಿಜೆಪಿ, ಶಿವಸೇನೆ ಹೊರತು ಪಡಿಸಿ ಬೇರೆ ಬೇರೆಯಾಗಿ ಸ್ಪರ್ಧಿಸಿದ್ದವು.

ವಿಧಾನಸಭಾ ಚುನಾವಣೆಯಲ್ಲಿ ಅಭೂತಪೂರ್ವ ಗೆಲುವು ಸಾಧಿಸಿರುವ ಬಿಜೆಪಿ ನೇತೃತ್ವದ ಮಹಾಯುತಿ ಪಾಲಿಕೆ ಚುನಾವಣೆಗಳಲ್ಲೂ ಗೆಲುವಿನತ್ತ ದಾಪುಗಾಲು ಇಟ್ಟಿದೆ.

ಮುಂಬೈ, ಪೂನಾ, ನಾಗಪುರ ಸೇರಿದಂತೆ ಪ್ರಮುಖ ಪಾಲಿಕೆಗಳಲ್ಲಿ ಬಿಜೆಪಿ ನೇತೃತ್ವದ ಮಹಾಯುತಿ ಮುನ್ನಡೆ ಕಾಯ್ದುಕೊಂಡಿದ್ದು, ಕಾಂಗ್ರೆಸ್, ಶಿವಸೇನೆ, ಶರತ್ ಪವಾರ್ ನೇತೃತ್ವದ ಎನ್‌ಸಿಪಿ ಹಿನ್ನಡೆ ಅನುಭವಿಸಿವೆ. ಮುಂಬೈನ ಒಟ್ಟು 277 ವಾರ್ಡ್‌ಗಳ ಪೈಕಿ ಬಿಜೆಪಿ 42, ಶಿಂಧೆ ನೇತೃತ್ವದ ಶಿವಸೇನೆ 13, ಉದ್ಧವ್ ನೇತೃತ್ವದ ಶಿವಸೇನೆ 28, ಕಾಂಗ್ರೆಸ್ 6, ಎಂಎನ್‌ಎಸ್ 2 ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿವೆ. ನವಿ ಮುಂಬೈ ಪಾಲಿಕೆಯ 11 ವಾರ್ಡ್‌ಗಳ ಪೈಕಿ ಬಿಜೆಪಿ 15, ಶಿಂಧೆ ಶಿವಸೇನೆ 12 ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿವೆ. ಥಾಣೆಯಲ್ಲಿ ಒಟ್ಟು 131 ವಾರ್ಡ್‌ಗಳಿದ್ದು, ಶಿಂಧೆ ಶಿವಸೇನೆ 14, ಬಿಜೆಪಿ 12, ಶರದ್ ಪವಾರ್‌ರವರ ಎನ್‌ಸಿಪಿ 2 ವಾರ್ಡ್‌ಗಳಲ್ಲಿ ಮುನ್ನಡೆಯಲ್ಲಿವೆ. ಮುಂಬೈನ 227 ವಾರ್ಡ್‌ಗಳು ಸೇರಿ ಮಹಾರಾಷ್ಟ್ರದ 893 ಪಾಲಿಕೆ / ಪುರಸಭೆ ವಾರ್ಡ್‌ಗಳ 2869 ಸ್ಥಾನಗಳಿಗೆ ಗುರುವಾರ ಮತದಾನ ನಡೆದಿತ್ತು. ಇಂದು ಮತ ಎಣಿಕೆ ನಡೆದಿದೆ. ಸಂಜೆಯೊಳಗೆ ಎಲ್ಲಾ ಪಾಲಿಕೆ, ಪುರಸಭೆಗಳ ಫಲಿತಾಂಶ ಪ್ರಕಟವಾಗಲಿದೆ.

# ಮಾದಕ ವಸ್ತುಗಳ ವಿರುದ್ಧ ಯುವ ಕಾಂಗ್ರೆಸ್ ಜಾಗೃತಿ ಅಭಿಯಾನ




**ಮೈಸೂರು: ಜ.16:–** ಕ್ರಿಕೆಟ್ ಟೂರ್ನಮೆಂಟ್ ಮೂಲಕ ಯುವಕರನ್ನು ಸಂಘಟಿಸಿ ಮಾದಕ ವಸ್ತುಗಳ ಸೇವನೆ ವಿರುದ್ಧ ಜಾಗೃತಿ ಮೂಡಿಸಿದ ಯುವ ಕಾಂಗ್ರೆಸ್‌ನ ಅಭಿಯಾನ ಶ್ಲಾಘನೀಯ ಎಂದು ಯುವ ಕಾಂಗ್ರೆಸ್ ರಾಜ್ಯಾಧ್ಯಕ್ಷ ಹೆಚ್.ಎಸ್.ಮಂಜುನಾಥ್ ಹೇಳಿದರು.

ನಗರದ ಡಾ.ರಾಜಕುಮಾರ್ ರಸ್ತೆಯಲ್ಲಿರುವ ಶಮ್ಸ್ ಫಂಕ್ಷನ್ ಹಾಲ್‌ನಲ್ಲಿ ಯುವ ಕಾಂಗ್ರೆಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ಅಬ್ರಾರ್ ಮೊಹಮ್ಮದ್ ನೇತೃತ್ವದಲ್ಲಿ ಏರ್ಪಡಿಸಿದ್ದ ತನ್ವೀರ್ ಸೇಠ್ ಕಪ್ ಕ್ರಿಕೆಟ್ ಟೂರ್ನಮೆಂಟ್ ಸಮಾರೋಪ ಸಮಾರಂಭದಲ್ಲಿ ಮೈಸೂರಿನ ಎಕ್ಸಲೆಂಟ್ ವಾರಿಯರ್ಸ್ ತಂಡಕ್ಕೆ ತನ್ವೀರ್ ಸೇಠ್ ಕಪ್ ವಿತರಿಸಿ ಮಾತನಾಡಿದರು.
ಜನವರಿ 3 ರಂದು ರಾಜೀಜಿನಗರದ ಈದ್ಗಾ ಮೈದಾನದಲ್ಲಿ ಶಾಸಕ ತನ್ವೀರ್ ಸೇಠ್ ಅವರು ಮಾದಕ ವಸ್ತುಗಳ ವಿರುದ್ಧ ಜಾಗೃತಿ ಮೂಡಿಸಲು ಯುವ ಕಾಂಗ್ರೆಸ್ ಆಯೋಜಿಸಿದ್ದ ತನ್ವೀರ್ ಸೇಠ್ ಕಪ್ ಕ್ರಿಕೆಟ್ ಟೂರ್ನಮೆಂಟ್‌ಗೆ ಚಾಲನೆ ನೀಡಿದ್ದರು. ಇದೀಗ ಈ ಟೂರ್ನಮೆಂಟ್ ಅಭೂತಪೂರ್ವ ಯಶಸ್ಸಿನೊಂದಿಗೆ ಮುಕ್ತಾಯವಾಗಿ ಯುವ ಜನಾಂಗಕ್ಕೆ ಒಂದು ಉತ್ತಮ ಸಂದೇಶ ನೀಡಿದೆ. ಯುವಕರು ಮನಸ್ಸು ಮಾಡಿದರೆ ಯಾವುದೇ ಸಾಧನೆ ಮಾಡಬಹುದು ಎನ್ನಲು ಈ ಕ್ರೀಡಾಕೂಟವೇ ಸಾಕ್ಷಿ, ಈ ಯಶಸ್ಸು ಈ ಟೂರ್ನಮೆಂಟ್ ಆಯೋಜಿಸಿರುವ ರಾಜ್ಯ ಯುವ ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಅಬ್ರಾರ್ ಮೊಹಮ್ಮದ್ ಅವರಿಗೆ ಸಲ್ಲುತ್ತದೆ ಎಂದರು.

ಮೈಸೂರಿನಲ್ಲಿ ಡ್ರಗ್ಸ್ ತಯಾರು ಮಾಡುವ ಜಾಲವನ್ನು ಪೊಲೀಸರು ಪತ್ತೆ ಹಚ್ಚಿದ್ದಾರೆ. ಅದು ಇಲ್ಲಿ ತಯಾರಾಗಿ ಮುಂಬೈನಲ್ಲಿ ಮಾರಾಟವಾಗುತ್ತಿತ್ತು ಎನ್ನಲಾಗಿದೆ. ನಮ್ಮ ಯುವಕರನ್ನು ಡ್ರಗ್ಸ್ ಮುಕ್ತರನ್ನಾಗಿ ಮಾಡುವ ಜವಾಬ್ದಾರಿ ನಮ್ಮ ಮೇಲಿದೆ. ಯುವ ಜನಾಂಗವನ್ನು ಶಿಕ್ಷಣದತ್ತ ಮುಖ ಮಾಡಲು ಪ್ರೇರೇಪಿಸಬೇಕು, ಶಿಕ್ಷಣ ಕಡಿಮೆ ಇರುವ ಕಡೆ, ವ್ಯಸನಿಗಳು ಹೆಚ್ಚಾಗುತ್ತಾರೆ ಎಂದು ಮಂಜುನಾಥ್ ಎಚ್ಚರಿಸಿದರು. ಪ್ರಸ್ತುತ ದಿನದಲ್ಲಿ ಯುವಕರು ಹೆಚ್ಚಾಗಿ ರಾಜಕೀಯಕ್ಕೆ ಬರಬೇಕು, ಪ್ರಶ್ನಿಸುವ ಮನೋಭಾವ ಇಟ್ಟುಕೊಳ್ಳಬೇಕು. ಇದರಿಂದ ನಾಯಕತ್ವ ಗುಣಗಳು ಬರುತ್ತವೆ. ದೇಶದ ರಾಜಕೀಯ ಬೆಳವಣಿಗೆಗಳ ಬಗ್ಗೆ ಜಾಗೃತರಾಗಬೇಕು ಎಂದರು.
ಯುವ ಕಾಂಗ್ರೆಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಮತ್ತು ಕರ್ನಾಟಕ ಉಸ್ತುವಾರಿ ನಿಗಮ್ ಭಂಡಾರಿ ಮಾತನಾಡಿ, ಕ್ರೀಡೆ ನಮ್ಮನ್ನು ದೈಹಿಕವಾಗಿ ಮಾನಸಿಕವಾಗಿ ಆರೋಗ್ಯವಾಗಿಡುವುದರ ಜತೆ ನಮಗೆ ಪ್ರಾಮಾಣಿಕತೆ, ವಿನಯತೆ, ಧೈರ್ಯ ಮತ್ತು ಪ್ರೀತಿಯನ್ನು ಕಲಿಸುತ್ತದೆ. ನಮ್ಮನ್ನು ಮಾನಸಿಕವಾಗಿ ಸದೃಢವಾಗಿಸುತ್ತದೆ. ಮುಂದಿನ ದಿನಗಳಲ್ಲಿ ನಮ್ಮ ಕ್ರೀಡಾಪಟುಗಳು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸುವಂತಾಗಲಿ ಎಂದು ಅಶಿಸಿದರು.

ಮೈಸೂರು ಮಹಾನಗರ ಪಾಲಿಕೆ ಮಾಜಿ ವಿರೋಧಪಕ್ಷದ ನಾಯಕರಾದ ಕೆ.ಸಿ.ಶೌಕಪಾಷ ಅವರು ಮಾತನಾಡಿ, ಶಾಸಕರಾದ ತನ್ವೀರ್ ಸೇಠ್ ಮಾರ್ಗದರ್ಶನದಲ್ಲಿ ಯುವ ಕಾಂಗ್ರೆಸ್ ಏರ್ಪಡಿಸಿದ್ದ ಮಾದಕ ವಸ್ತುಗಳ ವಿರುದ್ಧ ಜಾಗೃತಿ ಮೂಡಿಸುವ ತನ್ವೀರ್ ಸೇಠ್ ಕಪ್ ಕ್ರಿಕೆಟ್ ಟೂರ್ನಮೆಂಟ್ ಯಶಸ್ಸು ಕಂಡಿದೆ. ಮಾದಕ ವಸ್ತುಗಳ ಮಾರಾಟ, ಸೇವನೆ, ತಯಾರಿಕೆ ತಡೆಗಟ್ಟುವುದು ಕೇವಲ ಪೊಲೀಸರ ಜವಾಬ್ದಾರಿಯಲ್ಲ ನಾಗರಿಕರ ಮೇಲೂ ಈ ಜವಾಬ್ದಾರಿ ಇದೆ. ನಾಗರಿಕರು ಪೊಲೀಸರ ಜತೆ ಸೇರಿ ಮಾದಕ ವಸ್ತುಗಳ ಸೇವನೆ, ಮಾರಾಟ ಮತ್ತು ತಯಾರಿಕೆಗೆ ಕಡಿವಾಣ ಹಾಕಬೇಕು ಎಂದರು.
ಇದೇ ವೇಳೆ ಮಾದಕ ವಸ್ತುಗಳ ಸೇವನೆ ವಿರುದ್ಧ ಸಭಿಕರು ಮತ್ತು ಗಣ್ಯರು ಪ್ರತಿಜ್ಞೆ ಸ್ವೀಕರಿಸಿದರು.

ಕಾರ್ಯಕ್ರಮದಲ್ಲಿ ರಾಜ್ಯ ಯುವ ಕಾಂಗ್ರೆಸ್ ಮಾಧ್ಯಮ ವಿಭಾಗದ ಅಧ್ಯಕ್ಷರಾದ ದೀಪಕ್‌ಗೌಡ, ರಾಜ್ಯ ಪ್ರಧಾನ ಕಾರ್ಯದರ್ಶಿ(ಆಡಳಿತ) ಬಾಹುಬಲಿ, ರಾಜ್ಯ ಪ್ರಧಾನ ಕಾರ್ಯದರ್ಶಿ ದೀಪಕ್ ಶಿವಣ್ಣ, ಮೈಸೂರು ನಗರ ಯುವ ಕಾಂಗ್ರೆಸ್ ಉಪಾಧ್ಯಕ್ಷ ನೌಫಿಲ್ ಅಹಮದ್, ಎನ್‌ಆರ್ ಕ್ಷೇತ್ರದ ಉಪಾಧ್ಯಕ್ಷ ಸೈಯದ್ ರಿಜ್ವಾನ್, ಯುವ ಮುಖಂಡ ಮಾಜಿದ್ ಹಿದಾಯತ್ ಖಾನ್, ದೇವರಾಜ ಬ್ಲಾಕ್ ಯುವ ಕಾಂಗ್ರೆಸ್ ಉಪಾಧ್ಯಕ್ಷ ಫೈರೋಜ್ ಖಾನ್, ಸಾಹುಕಾರ್ ಚನ್ನಯ್ಯ ಬ್ಲಾಕ್ ಉಪಾಧ್ಯಕ್ಷ ಅಲೀಂ ಪಾಷ, ಕೆಆರ್ ಕ್ಷೇತ್ರದ ಉಪಾಧ್ಯಕ್ಷ ಮಲ್ಲೇಶ್ ಮಲ್ಲ ಇನ್ನಿತರ ಯುವ ಕಾಂಗ್ರೆಸ್ ಮುಖಂಡರು ಇದ್ದರು.

# ಭಾವೈಕ್ಯತೆ ಸಂದೇಶದೊಡನೆ ಹರೀಶ್ ಗೌಡ ಸಂಕ್ರಾಂತಿ



**ಮೈಸೂರು: ಜ.16:–** ಮುಸಲ್ಮಾನ, ಕ್ರೈಸ್ತ, ಜೈನ, ಪೋಲಿಸ್, ಪೌರಕಾರ್ಮಿಕರು, ಆಶಾ ಕಾರ್ಯಕರ್ತೆಯರಿಗೆ ಎಳ್ಳು, ಬೆಲ್ಲ ಸೀರೆ, ಕಬ್ಬು ವಿತರಿಸಿ ಸಂಕ್ರಾಂತಿ ಆಚರಿಸುವ ಮೂಲಕ ಭಾವೈಕ್ಯತೆ ಬೆಸೆಯುವ ಸಂದೇಶ ಸಾರಿದರು ನಗರದ ದಿವಾನ್ಸ್ ರಸ್ತೆಯಲ್ಲಿರುವ ಖಾಸಗಿ ಹೋಟೆಲ್ ನಲ್ಲಿ ಮೈಸೂರು ಯುವ ಬಳಗದವತಿಯಿಂದ ಮಕರ ಸಂಕ್ರಾಂತಿ ಹಬ್ಬದ ಅಂಗವಾಗಿ ಶಾಸಕ ಹರೀಶ್ ಗೌಡ ಗೋಪೂಜೆ ನೆರವೇರಿಸಿದರು. ಬಳಿಕ ಮುಸಲ್ಮಾನ್ ,ಕ್ರೈಸ್ತರು, ಜೈನ , ಪೊಲೀಸ್, ಪೌರಕಾರ್ಮಿಕರು, ಆಶಾ ಕಾರ್ಯಕರ್ತೆಯರಿಗೆ ಎಳ್ಳು, ಬೆಲ್ಲ , ಕಬ್ಬು,ಸೀರೆ ವಿತರಿಸುವ ಮೂಲಕ ಸೌಹಾರ್ದತೆ ಮೆರೆದರು.

ಬಳಿಕ ಮಾತನಾಡಿದ ಅವರು, ಇತಿಹಾಸದಲ್ಲಿ ಎಲ್ಲಾ ಸಮುದಾಯಗಳ ಹಬ್ಬಗಳು ಬಂದರೆ ಸೌಹಾರ್ಧವಾಗಿ ಆಚರಣೆ ಮಾಡುವ ಪದ್ಧತಿ ನಮ್ಮ ನಾಡಿನಲ್ಲಿದೆ. ಆದರೆ ಕೆಲವು ಕಿಡಿಗೇಡಿಗಳಿಂದ ಸಮಾಜದಲ್ಲಿ ಶಾಂತಿಯನ್ನು ಕದಡವ ಯತ್ನಗಳು ನಡೆಯುತ್ತಿದ್ದು, ಆದ್ದರಿಂದ ಎಲ್ಲಾ ಸಮುದಾಯದ ಮುಖಂಡರು ಈ ಬಗ್ಗೆ ಲಕ್ಷ್ಯ ವಹಿಸಿ ಹಬ್ಬಗಳನ್ನು ಆಚರಣೆ ಮಾಡಲು ಮುಂದಾಗಬೇಕು. ಈ ದಿನ ಈ ಯುವಕರು ಒಟ್ಟಾಗಿ ಸೌಹಾರ್ದತೆಯಿಂದ ಹಬ್ಬವನ್ನು ಆಚರಿಸುತ್ತಾ ಬಂದಿರುವುದು ಬಹಳ ಸಂತಸದ ವಿಚಾರ. ಇದೇ ಥರ ಸೌಹಾರ್ದತೆ ಆಚರಣೆ ಪ್ರತಿ ಜಿಲ್ಲೆಯಲ್ಲಿ ಆದರೆ ಬಹಳ ಉತ್ತಮ ಬೆಳವಣಿಗೆ ರಾಜ್ಯದಲ್ಲಿ ಕಾಣಲು ಸಾಧ್ಯವಿದೆ ಎಂದರು.

# ಶೈಕ್ಷಣಿಕ ಸಲುವಾಗಿ ಕಲಿಕೆಯ ಕಲ್ಯಾಣ ಅಭಿಯಾನ : ಅಬುಬಕರ್




ಧೈರ್ಯದ ದಾರಿ

**ಲಿಂಗಸುಗೂರು,ಜ.16:** ಕಲ್ಯಾಣ ಕರ್ನಾಟಕದಲ್ಲಿ 371 (ಜೆ) ಜಾರಿಯಾಗಿ ದಶಕಗಳು ಕಳೆದರು ಶೈಕ್ಷಣಿಕ ಸೌಲಭ್ಯಗಳಿಲ್ಲದೇ ಈ ಭಾಗದ ವಿದ್ಯಾರ್ಥಿಗಳು ಶೈಕ್ಷಣಿಕವಾಗಿ ತುಂಬ ಹಿಂದುಳಿಯುವಂತಾಗಿದೆ ಎಂದು ಸ್ಟೂಡೆಂಟ್ಸ್ ಇಸ್ಲಾಮಿಕ್ ಆರ್ಗನೈಸೇಷನ್ ಆಫ್ ಇಂಡಿಯಾದ ರಾಜ್ಯ ಕಾರ್ಯದರ್ಶಿ ಅಬುಬಕರ್ ಸಿದ್ದಿಕಿ ಆರೋಪಿಸಿದರು.

ಲಿಂಗಸುಗೂರು ಪಟ್ಟಣದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯನ್ನು ನಡೆಸಿ ಮಾತನಾಡಿದ ಅವರು, ಕಲ್ಯಾಣ ಕರ್ನಾಟಕ ಪ್ರದೇಶದ ಗಂಭೀರ ಶೈಕ್ಷಣಿಕ ಬಿಕ್ಕಟ್ಟನ್ನು ಎದುರಿಸಲು, ಸ್ಟೂಡೆಂಟ್ಸ್ ಇಸ್ಲಾಮಿಕ್ ಆರ್ಗನೈಸೇಷನ್ ಆಫ್ ಇಂಡಿಯಾ ಹಾಗೂ ಕರ್ನಾಟಕ ರಾಜ್ಯ ಘಟಕ ಸೆಂಟರ್ ಫಾರ್ ಎಜುಕೇಷನಲ್ ರಿಸರ್ಚ್ ಅನಾಲಿಸಿಸ್ ಸಹಯೋಗದಲ್ಲಿ "ಕಲಿಕೆಯೇ ಕಲ್ಯಾಣ" ಅಭಿಯಾನವನ್ನು ಆರಂಭಿಸಲಾಗಿದೆ.

ಕಲ್ಯಾಣ ಕರ್ನಾಟಕ ಪ್ರದೇಶದ ಕೊಪ್ಪಳ, ರಾಯಚೂರು, ಕಲಬುರಗಿ, ಯಾದಗಿರಿ, ಬೀದರ್, ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಶಿಕ್ಷಣದಲ್ಲಿ ತೀರ ವಿದ್ಯಾರ್ಥಿಗಳು ತೀರ ಹಿಂದುಳಿದಿದ್ದಾರೆ. ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಗಳಲ್ಲಿನ ಫಲಿತಾಂಶ ವಿದ್ಯಾರ್ಥಿಗಳ ಶೈಕ್ಷಣಿಕ ಗುಣಮಟ್ಟ ಎಷ್ಟರಮಟ್ಟಿಗೆ ಇದೆ ಎಂದು ತಿಳಿಸುತ್ತದೆ. ಅಲ್ಲದೇ ಈ ಭಾಗದಲ್ಲಿ 21,000 ಶಿಕ್ಷಕರ ಹುದ್ದೆಗಳು ಖಾಲಿ ಇವೆ.

ಈ ಮೇಲಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಸರ್ಕಾರಿ ಹಾಗೂ ಮೌಲಾನಾ ಆಜಾದ್ ಶಾಲೆಗಳನ್ನು ಗಮನದಲ್ಲಿಟ್ಟುಕೊಂಡು ಸಮುದಾಯ ಕೇಂದ್ರಿತ ಕಾರ್ಯತಂತ್ರವನ್ನು ರೂಪಿಸಲಾಗಿದೆ. ಸಾರ್ವಜನಿಕರಲ್ಲಿ ಶಿಕ್ಷಣದ ಮಹತ್ವದ ಬಗ್ಗೆ ಅರಿವು ಮೂಡಿಸುವುದು, ಸಮುದಾಯದ ಬೆಂಬಲದಿಂದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಪರೀಕ್ಷೆಯಲ್ಲಿ ಅನುತ್ತೀರ್ಣ ಮಟ್ಟವನ್ನು ತಗ್ಗಿಸುವುದು ಉದ್ದೇಶದಿಂದ ಈ ಅಭಿಯಾನವನ್ನು ಆರಂಭಿಸಲಾಗಿದ್ದು, ಸಾರ್ವಜನಿಕರು, ಶೈಕ್ಷಣಿಕ ರಂಗದಲ್ಲಿ ಕಾರ್ಯನಿರ್ವಹಿಸುವವರು, ರಾಜಕಾರಣಿಗಳು ಈ ಅಭಿಯಾನವನ್ನು ಬೆಂಬಲ ನೀಡಿ ಯಶಸ್ವಿಗೊಳಿಸಬೇಕೆಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಸಂಘಟನೆಯ ಜಿಲ್ಲಾಧ್ಯಕ್ಷ ಇಮ್ತಿಯಾಜ್, ತಾಲೂಕು ಅಧ್ಯಕ್ಷ ಅಮೀರ್ ಅಲ್ಲಾಭಕ್ಷ, ಅಬ್ದುಲ್ ನಹೀಂ, ಮೌಲಾನಾ ಅಬು ಸೈಯದ್ ಖಾಸ್ಮೀ ಸೇರಿ ಇತರರು ಇದ್ದರು.

# ತಾಲೂಕು ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಗೆ ಸದ್ದಾಂ ಹುಸೇನ್ ಆಯ್ಕೆ

ಧೈರ್ಯದ ದಾರಿ




**ಅರಕೇರಾ,ಜ.17–:** ತಾಲೂಕಿನ ಬಿ.ಗಣೇಕಲ್ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಮೂಕನಾಯಕ ತಾಂಡದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹ ಶಿಕ್ಷಕರಾದ ಸದ್ದಾಂ ಹುಸೇನ್ ತಾಲೂಕು ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಇವರು ಮೊದಲು ಪೋಲಿಸ್ ಇಲಾಖೆಯಲ್ಲಿ ಸೇವೆ ಸಲ್ಲಿಸಿ ನಂತರ ಶಿಕ್ಷಕರ ಹುದ್ದೆಗೆ ನೇಮಕಗೊಂಡರು ಸದ್ದಾಂ ಹುಸೇನ್ ಮಕ್ಕಳಿಗೆ ಪಾಠ ಜೊತೆಗೆ ಪಠ್ಯೇತರ ಚಟುವಟಿಕೆಗಳಾದ ಹಾಡು, ಕಥೆ, ಡ್ಯಾನ್ಸ್ ಮತ್ತು ಪಿಕ್ನಿಕ್ ಹೀಗೆ ಹಲವಾರು ಚಟುವಟಿಕೆಗಳ ಮುಖಾಂತರ ಮಕ್ಕಳ ಕಲಿಕೆಗೆ ಪ್ರೋತ್ಸಾಹಿಸುತ್ತಿದ್ದಾರೆ. ವಿದ್ಯಾರ್ಥಿಗಳ ಅಚ್ಚು–ಮೆಚ್ಚಿನ ಶಿಕ್ಷಕರಾಗಿದ್ದಾರೆ ಇಂತಹ ಶಿಕ್ಷಕರಿಗೆ ತಾಲೂಕು ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ದೊರೆತಿದ್ದು ಗ್ರಾಮಸ್ಥರು ಮತ್ತು ಬಿ.ಗಣೇಕಲ್ ಸ್ನೇಹ ಬಳಗ ಶುಭಹಾರೈಸಿದ್ದಾರೆ.

ದೇವದುರ್ಗ ತಾಲೂಕಿನ ಹೂವಿನಹೆಡಗಿ ಗಡ್ಡೆಗೂಳಿ ಬಸವೇಶ್ವರ ಕಲ್ಯಾಣ ಮಂಟಪದಲ್ಲಿ ಜನವರಿ 17 ಶನಿವಾರ ರಂದು ನಡೆಯುವ ತಾಲೂಕು ಮಟ್ಟದ ಗುರು ನಮನ, ಶಿಕ್ಷಕರ ದಿನಾಚರಣೆ ಹಾಗೂ ಉತ್ತಮ ಶಿಕ್ಷಕರ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಶಾಲಾ ಶಿಕ್ಷಣ ಇಲಾಖೆ ಪ್ರಶಸ್ತಿ ಪ್ರಧಾನ ಮಾಡಲಿದೆ.

# ಲಕ್ಕುಂಡಿ ಗ್ರಾಮದಲ್ಲಿ ನಿಧಿ ಹುಡುಕಾಟ ಆರಂಭ

**ಗದಗ ,ಜ.16–** ಜಿಲ್ಲೆಯ ವಾಸ್ತುಶಿಲ್ಪ ಪಾರಂಪರಿಕ ತಾಣ ಐತಿಹಾಸಿಕ ಲಕ್ಕುಂಡಿ ಗ್ರಾಮದಲ್ಲಿ ಮನೆ ನಿರ್ಮಾಣದ ಸಮಯದಲ್ಲಿ ಚಿನ್ನದ ಆಭರಣಗಳು ಪತ್ತೆಯಾದ ನಂತರ ಕರ್ನಾಟಕ ಸರ್ಕಾರ ಇಂದಿನಿಂದ ನಿಧಿ ಹುಡುಕಾಟಕ್ಕೆ ಮುಂದಾಗಿದೆ.ಲಕ್ಕುಂಡಿಯ ಕೋಟೆ ವೀರಭದ್ರೇಶ್ವರ ದೇವಾಲಯದ ಆವರಣದಲ್ಲಿ ಪೂರ್ಣ ಪ್ರಮಾಣದ ಉತ್ಖನನವನ್ನು ಪ್ರಾರಂಭಿಸಲಾಗಿದೆ.ಪ್ರವಾಸೋದ್ಯಮ ಇಲಾಖೆ, ಪುರಾತತ್ವ, ವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಲಕ್ಕುಂಡಿ ಪರಂಪರೆ ಅಭಿವೃದ್ಧಿ ಪ್ರಾಧಿಕಾರ ಮತ್ತು ಜಿಲ್ಲಾಡಳಿತ ಜಂಟಿಯಾಗಿ ಈ ಯೋಜನೆಯನ್ನು ಕೈಗೆತ್ತಿಕೊಳ್ಳುತ್ತಿವೆ.



ದೇವಾಲಯದ ಆವರಣದಲ್ಲಿ ಉತ್ಖನನ ನಡೆಸಲು ಜೆಸಿಬಿಗಳು, ಟ್ರಕ್‌ಗಳು ಮತ್ತು ಟ್ರ್ಯಾಕ್ಟರ್‌ಗಳನ್ನು ಸ್ಥಳಾಂತರಿಸಲಾಯಿತು. ಉತ್ಖನನಕ್ಕಾಗಿ 10 ಮೀಟರ್‌ನಿಂದ 10 ಮೀಟರ್ ಪ್ರದೇಶವನ್ನು ಗುರುತಿಸಲಾಗಿದೆ. ಈಗಾಗಲೇ ಉತ್ಖನನಕ್ಕಾಗಿ ಪ್ರದೇಶವನ್ನು ಗುರುತಿಸಲಾಗಿದೆ.ಉತ್ಖನಕ್ಕಾಗಿ ಸುಮಾರು 15 ಮಹಿಳೆಯರು ಮತ್ತು ಐವರು ಪುರುಷರನ್ನು ನೇಮಿಸಿಕೊಂಡಿದ್ದೇವೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಲಕ್ಕುಂಡಿಯನ್ನು ಒಂದು ಕಾಲದಲ್ಲಿ ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು, ಕಲ್ಚೂರಿಗಳು ಮತ್ತು ವಿಜಯನಗರ ರಾಜರು ಆಳುತ್ತಿದ್ದರು ಮತ್ತು ಪ್ರಸಿದ್ಧ ಲೋಕೋಪಕಾರಿ ದಾನಚಿಂತಾಮಣಿ ಅತ್ತಿಮಬ್ಬೆಯೊಂದಿಗೆ ಸಂಬಂಧ ಹೊಂದಿದ್ದರು. ಪ್ರಾಚೀನ ಕಾಲದಲ್ಲಿ ಚಿನ್ನದ ನಾಣ್ಯಗಳನ್ನು ಮುದ್ರಿಸಲಾಗುತ್ತಿದ್ದ ಸ್ಥಳವೂ ಇದಾಗಿತ್ತು ಎಂದು ಪುರಾತತ್ವ ಇಲಾಖೆಯ ಮೂಲಗಳು ತಿಳಿಸಿವೆ.ಈ ಪ್ರದೇಶವು ಚಿನ್ನ, ಬೆಳ್ಳಿ, ವಜ್ರ, ಮುತ್ತು, ಮಾಣಿಕ್ಯ, ಹವಳ ಮತ್ತು ಬೆಕ್ಕಿನ ಕಣ್ಣಿನ ಕಲ್ಲುಗಳು ಸೇರಿದಂತೆ ಸಮಾಧಿ ಮಾಡಲಾದ ಅಮೂಲ್ಯ ವಸ್ತುಗಳಿಂದ ಸಮೃದ್ಧವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಲಕ್ಕುಂಡಿ ಐತಿಹಾಸಿಕವಾಗಿ ಸಮೃದ್ಧ ಕೇಂದ್ರವಾಗಿದೆ ಮತ್ತು ಅಪಾರ ಭೌತಿಕ ಸಂಪತ್ತು ಇನ್ನೂ ನೆಲದಡಿಯಲ್ಲಿ ಅಡಗಿರಬಹುದು ಎಂದು ಪುರಾವೆಗಳು ಸೂಚಿಸುತ್ತವೆ ಎಂದು ಉತ್ಖನನದಲ್ಲಿ ತೊಡಗಿರುವ ಮೂಲಗಳು ತಿಳಿಸಿವೆ.ನವೆಂಬರ್ 2024 ರಲ್ಲಿ ನಡೆಸಿದ ಪರಿಶೋಧನೆಯ ಸಮಯದಲ್ಲಿ, ಲಕ್ಕುಂಡಿಯಲ್ಲಿ ಸಾವಿರಾರು ಪ್ರಾಚೀನ ಕಲಾಕೃತಿಗಳು ಪತ್ತೆಯಾಗಿವೆ.

ಇತ್ತೀಚೆಗೆ, ಆಭರಣಗಳ ಆವಿಷ್ಕಾರವು ಈ ಸ್ಥಳದ ಬಗ್ಗೆ ಆಸಕ್ತಿಯನ್ನು ಮತ್ತಷ್ಟು ಹೆಚ್ಚಿಸಿದೆ. ಈಗಲೂ ಸಹ ನೀಲಮಣಿ, ಮುತ್ತು, ರತ್ನ, ವಜ್ರ ಮತ್ತು ಬೆಕ್ಕಿನ ಕಣ್ಣುಗಳಂತಹ ಅಮೂಲ್ಯ ಕಲ್ಲುಗಳು ಪ್ರದೇಶದ ವಿವಿಧ ಭಾಗಗಳಲ್ಲಿ ಕಂಡುಬರುತ್ತಿವೆ ಎಂದು ವರದಿಯಾಗಿದೆ.
ಈ ಹೊಸ ಉತ್ಖನನವು ಹೆಚ್ಚಿನ ಐತಿಹಾಸಿಕ ಪ್ರಾಮುಖ್ಯತೆಯನ್ನು ಹೊಂದಿದೆ ಮತ್ತು ಕರ್ನಾಟಕದ ಮಧ್ಯಕಾಲೀನ ಇತಿಹಾಸಕ್ಕೆ ಸಂಬಂಧಿಸಿದ ಶಾಸನಗಳು, ಸಾರಕಗಳು, ಶಿಲ್ಪಗಳು ಮತ್ತು ಆಭರಣಗಳನ್ನು ಪಡೆಯುವ ನಿರೀಕ್ಷೆಯಿದೆ ಎಂದು ಪುರಾತತ್ವ ತಜ್ಞರು ಹೇಳಿದ್ದಾರೆ,

# ಜಿಬಿಎ ಚುನಾವಣೆ ತಯಾರಿ ಆರಂಭಿಸಿದ ಆಯೋಗ

**ಬೆಂಗಳೂರು, ಜ.16–** ಸುಪ್ರಿಂ ಕೋರ್ಟ್ ಸೂಚನೆಯಂತೆ ಬರುವ ಜೂ.30 ರೊಳಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯ ಐದು ಪಾಲಿಕೆಗಳಿಗೆ ಚುನಾವಣೆ ನಡೆಸಲು ರಾಜ್ಯ ಚುನಾವಣಾ ಆಯೋಗ ಸದ್ದಿಲ್ಲದೆ ಕಾರ್ಯಚರಣೆ ಆರಂಭಿಸಿದೆ. ಜಿಬಿಎ ಚುನಾವಣೆ ನಡೆಸಲು ಅಲರ್ಟ್ ಆಗಿರುವ ಆಯೋಗ ಚುನಾವಣೆ ಸಂಬಂಧ ಜ.20 ರಂದು ಮಹತ್ವದ ಸಭೆ ಕರೆದಿದೆ.
ಜಿಬಿಎ ಚುನಾವಣೆ ಸಂಬಂಧ ಕರೆದಿರುವ ಈ ಸಭೆಯಲ್ಲಿ ಸರ್ಕಾರದ ಅಧಿಕಾರಿಗಳು ಮತ್ತು ಜಿಬಿಎ ಅಧಿಕಾರಿಗಳು ಭಾಗಿಯಾಗುತ್ತಿದ್ದಾರೆ.




ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್‌ರಾವ್, ಬೆಂಗಳೂರು ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ ಹಾಗೂ ಕೇಂದ್ರ ಪಾಲಿಕೆಗಳ ಆಯುಕ್ತರುಗಳು ಈ ಸಭೆಯಲ್ಲಿ ಭಾಗವಹಿಸುತ್ತಿದ್ದಾರೆ. ಸಭೆಯಲ್ಲಿ ಐದು ನಗರ ಪಾಲಿಕೆಗಳ ಮತದರರ ಪಟ್ಟಿ ಪರಿಶೀಲನೆ ಮಾಡುವುದರ ಜೊತೆಗೆ ನಗರಪಾಲಿಕೆ ವಾರ್ಡ್ ಮೀಸಲಾತಿಯ ಆಕ್ಷಪಣೆಗಳ ಸಂಭಂದ ಚರ್ಚೆ ನಡೆಯುವ ಸಾಧ್ಯತೆಗಳಿವೆ.ಚುನಾವಣಾ ಕಾರ್ಯಕ್ಕೆ ಬಿಎಲ್ ಓ ಗಳ ನೇಮಕಾತಿ, ಕ್ಷೇತ್ರವಾರು ವಾರ್ಡ್ ವಿಂಗಡಣೆಯದ ವಾರ್ಡ್ ಗಳ ಮತಗಟ್ಟೆಗಳ ಬಗ್ಗೆಯೂ ಚರ್ಚಿಸಲಾಗುವುದು ಎಂದು ಆಯೋಗದ ಮೂಲಗಳು ತಿಳಿಸಿವೆ.

ಸೂಕ್ಷ್ಮ ಹಾಗೂ ಅತಿಸೂಕ್ಷ್ಮ ಮತಗಟ್ಟೆಗಳ ಮಾಹಿತಿ ಸಂಗ್ರಹ, ಶಾಲಾ ಕಾಲೇಜುಗಳ ಪರೀಕ್ಷೆ ವೇಳಾಪಟ್ಟಿ ಮಾಹಿತಿ ಪಡೆದು ನಂತರ ಜಿಬಿಎ ಚುನಾವಣೆಗೆ ದಿನಾಂಕ ನಿಗದಿ ಮಾಡುವ ಸಾಧ್ಯತೆಗಳಿವೆ ಎನ್ನಲಾಗಿದೆ. ಚುನಾವಣೆ ಸಂಬಂಧ ಸಿಬ್ಬಂದಿಗಳ ಸಂಖ್ಯೆ ಮತ್ತು ತರಭೇತಿ ನೀಡುವುದು, ಅವಶ್ಯವಿರುವ ಇವಿಎಂ ಮಿಷನ್‌ಗಳ ಮಾಹಿತಿ ಸಂಗ್ರಹ, ಭದ್ರತೆ ಮತ್ತು ಮತಪೆಟ್ಟಿಗೆಗಳ ಸ್ಟ್ರಾಂಗ್ ರೂಂಗಳ ಬಗ್ಗೆಯೂ ಚರ್ಚೆ ನಡೆಯಲಿದೆ.ಸಭೆಯಲ್ಲಿ ಜಿಬಿಎ ಚುನಾವಣೆಗಳನ್ನು ಇವಿಎಂ ಯಂತ್ರಗಳ ಬದಲು ಬ್ಯಾಲೆಟ್ ಪೇಪರ್‌ನಲ್ಲಿ ನಡೆಸುವ ಬಗ್ಗೆಯೂ ಚರ್ಚಿಸಿ ಅಂತಿಮ ನಿರ್ಧಾರ ಕೈಗೊಳ್ಳುವ ಸಾಧ್ಯತೆಗಳಿವೆ ಎಂದು ತಿಳಿದುಬಂದಿದೆ.

Owned, and published by SYED AHAMAD HUSSAINI MATWALE from Ward No,21 S S Matwale Hussaini Saheb Dargha, Jummal Doddi, Po-Manvi,Raichur, Karnataka -584123.
Printed at Hulkoti, New Court, Opposite Plot No, 28, RS No 312/3B, Garag Complex, Gadag, Karnataka-582101 Editor: SYED AHAMAD HUSSAINI MATWALE